ಬೆಲೆ ರೂ.2.50
D.O.P - 15th of every month at Udupi Head Office

ಸ್ಥಾನಿಕ ಬ್ರಾಹ್ಮಣರ ವಿಶ್ವಕೋಶದಲ್ಲಿ ನಿಮ್ಮ ವಿಳಾಸವನ್ನು ನೋಂದಾಯಿಸಿರಿ
ನಿಮ್ಮ ಮೊಬೈಲ್‌ಗೆ
STHANIKA
PLAY STOREನಿಂದ STHANIKA ಆ್ಯಪನ್ನು ಡೌನ್‌ಲೋಡ್ ಮಾಡಿಕೊಳ್ಳಿ
ಸಮಾಜಬಾಂಧವರೊಡನೆ ಸದಾ ಸಂಪರ್ಕದಲ್ಲಿರಿ

# ಶ್ರೀ ಶಾರದಾ


ಮಾಸಪತ್ರಿಕೆ – 15 ಅಕ್ಟೋಬರ್ 2022

॥ ಧಿಯೋ ಯೋನಃ ಪ್ರಚೋದಯಾತ್ ॥

RNI No.KAR/KAN/2000/2758 ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.), ಶ್ರೀ ಶಾರದಾ ಮಂಟಪ, ಶ್ರೀ ಶಾರದಾ ನಗರ, ಕುಂಜಿಬೆಟ್ಟು, ಉಡುಪಿ – 576 102. ☎ 0820-2958444, 8971185844
ಸಂಪುಟ-22 ಸಂಚಿಕೆ-10 ಪುಟಗಳು-8 Registered Under No.UDP/1260/2021-2023 Licenced to Post without Prepayment Licence No. SK/WPP/UDP/81/2021-23

## ಉಡುಪಿಯಲ್ಲಿ ಸಂಭ್ರಮದ ನವರಾತ್ರಿ ಹಬ್ಬ






ಅಶ್ವಯುಜ ಶುದ್ಧ ಪಾಡ್ಯದಿಂದ ಪ್ರಾರಂಭಗೊಂಡು ವಿಜಯದಶಮಿಯವರೆಗೆ ಉಡುಪಿ ಕುಂಜಿಬೆಟ್ಟಿನ ಶ್ರಿ ಶಾರದಾ ದೇವಸ್ಥಾನದಲ್ಲಿ ನಡೆದ ನವರಾತ್ರಿ ಉತ್ಸವದ ವೈಭವದಲ್ಲಿ ಪ್ರತಿದಿನ ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ಸಾಂಗವಾಗಿ ನೆರವೇರಿದವು. ವಿಶೇಷ ವಿದ್ಯುತ್‌ದೀಪಗಳ ಅಲಂಕಾರದಲ್ಲಿ ಕಂಗೊಳಿಸುತ್ತಿರುವ ಶ್ರೀ ಶಾರದಾ ಮಂಟಪ ಸಂಕೀರ್ಣದಲ್ಲಿ ಪ್ರತೀದಿನ ಪುಷ್ಪಾಲಂಕೃತ ದೇವಳದಲ್ಲಿ ವಿವಿಧ ವಿಶೇಷ ಅಲಂಕಾರಗಳಿಂದ ಶೋಭಿತಳಾದ ಶ್ರೀ ಶಾರದಾ ಮಾತೆಯು ಭಕ್ತಬಾಂಧವರ ಮನಸೂರೆಗೊಳ್ಳುತ್ತಿರುವುದು ದಿನದಿಂದ ದಿನಕ್ಕೆ ಬಂದಿರುವ ಭಕ್ತರ ಸಂಖ್ಯೆಗಳೇ ಸಾಕ್ಷಿಯಾಗಿತ್ತು. ಧಾರ್ಮಿಕ ಪ್ರಕ್ರಿಯೆಗಳು ಶ್ರೀ ಸತೀಶ್ ಭಟ್ ನೇತೃತ್ವದಲ್ಲಿ ಶ್ರೀ ಭವಾನಿಶಂಕರ ಉಪಾಧ್ಯಾಯ, ಶ್ರೀ ಜಗದೀಶ ಉಪಾಧ್ಯಾಯ, ಶ್ರೀ ಅರವಿಂದ ಶರ್ಮ, ಶ್ರೀ ಧರಣೀಶ್ ಭಟ್, ಶ್ರೀ ನಾಗೇಂದ್ರ ಭಟ್ ಮೊದಲಾದವರ ಸಹಕಾರದಿಂದ ಸುಗಮವಾಗಿ ನೆರವೇರಿತು.

ಪ್ರತಿದಿನದ ಬೆಳಗ್ಗಿನ ಪ್ರಾರ್ಥನೆಯಿಂದ ಪ್ರಾರಂಭಗೊಂಡು ಮಧ್ಯಾಹ್ನದ ಮಹಾಪೂಜೆಯು ವಿಶೇಷವಾಗಿ ನೆರವೇರಿದ ನಂತರ ಸಂಜೆ 4ರಿಂದ ಶ್ರೀ ಶಾರದಾ ಮಂಟಪದಲ್ಲಿ ಭಕ್ತಬಾಂಧವ ರಿಂದ ಶ್ರೀ ದುರ್ಗಾನಮಸ್ಕಾರ ಪೂಜಾ ಸೇವೆಯು ಅತ್ಯಂತ ವ್ಯವಸ್ಥಿತವಾಗಿ ನೆರವೇರುತ್ತಿತ್ತು. ಕಳೆದ ಹಲವು ವರ್ಷ ಗಳಿಂದ ನಡೆಯುತ್ತಿದ್ದ ಈ ದುರ್ಗಾನಮಸ್ಕಾರ ಪೂಜಾಸೇವೆಗೆ ಈ ವರ್ಷ ಸಮಾಜ ಬಾಂಧವರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದ್ದು ಪ್ರತೀ ದಿನ ಸರಾಸರಿ 5ರಿಂದ 6 ಸೇವೆಯಂತೆ ಒಟ್ಟು 53 ಸೇವಾಕರ್ತೃಗಳು ಶ್ರೀ ದೇವಿಯ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಸಂಜೆ 4.30ಕ್ಕೆ ಶ್ರೀ ದೇವಸ್ಥಾನದಲ್ಲಿ ಸಾಮೂಹಿಕ ಪ್ರಾರ್ಥನೆ ಯೊಂದಿಗೆ ಪ್ರಾರಂಭಗೊಳ್ಳುವ ದುರ್ಗಾ ನಮಸ್ಕಾರ ಪೂಜೆಯ ವಿಧಿಯು ಶ್ರೀ ಶಾರದಾ ಮಂಟಪದಲ್ಲಿ ಹಾಕಿರುವ ಮಂಡಲದಲ್ಲಿ ದೀಪನಮಸ್ಕಾರವು ಸುಮಾರು 8 ಗಂಟೆಗೆ ಮಹಾಮಂಗಳಾರತಿ ಯೊಂದಿಗೆ ಸಂಪನ್ನಗೊಳ್ಳುತ್ತಿತ್ತು. ಶ್ರೀ ಶಾಂಕರ ತತ್ವಪ್ರಸಾರ ಅಭಿಯಾನ ಉಡುಪಿ ಜಿಲ್ಲೆಯ ಸಹಯೋಗದೊಂದಿಗೆ ಪ್ರತಿದಿನ ಸಂಜೆ ಭಜನೆ ಹಾಗೂ ಕುಣಿತದ ಭಜನೆ ಕಾರ್ಯಕ್ರಮಗಳು ಆಯೋಜನೆಗೊಂಡಿತು. ನಂತರ ತೀರ್ಥ ಪ್ರಸಾದ ವಿತರಣೆ. 8.30ಕ್ಕೆ ಶ್ರೀ ದೇವಳದಲ್ಲಿ ವಿಶೇಷ ಮಂಗಳಾರತಿ ಯೊಂದಿಗೆ ಧಾರ್ಮಿಕ ಕಾರ್ಯಕ್ರಮ ಮುಕ್ತಾಯವಾಗುತ್ತಿತ್ತು. ನಂತರ ಪ್ರತಿದಿನ ಸುಮಾರು 300ರಿಂದ 350 ಜನರಿಗೆ ಭೋಜನ ಪ್ರಸಾದ ವಿತರಣೆಯಾಗುತ್ತಿತ್ತು.

**ವಿಜಯ ದಶಮಿ–ಶ್ರೀ ಚಂಡಿಕಾಯಾಗ :**

ವಿಜಯದಶಮಿಯಂದು ಬೆಳಿಗ್ಗೆ ಶ್ರೀ ದೇವಳದಲ್ಲಿ ಪ್ರಾರ್ಥನೆಯೊಂದಿಗೆ ಕದಿರುಕಟ್ಟುವ ಕಾರ್ಯಕ್ರಮವು ನೆರವೇರಿತು. ಬಳಿಕ ಯಾಗಶಾಲೆಯಲ್ಲಿ ಚಂಡಿಕಾಯಾಗವು ಶ್ರೀ ವೇದಮೂರ್ತಿ ಜಗದೀಶ ಉಪಾಧ್ಯಾಯ, ಶ್ರೀ ರವಿ ಉಪಾಧ್ಯಾಯ,

(3ನೇ ಪುಟಕ್ಕೆ...)

## ಉಡುಪಿ ಸ್ಥಾನಿಕ ಬ್ರಾಹ್ಮಣ ಸಂಘದ ವಾರ್ಷಿಕ ಮಹಾಸಭೆ




ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ ಉಡುಪಿ 2021–22 ನೇ ಸಾಲಿನ ವಾರ್ಷಿಕ ಮಹಾಸಭೆಯು ದಿನಾಂಕ 11.09.2022ರಂದು ಸಂಜೆ 4 ಗಂಟೆಗೆ ಉಡುಪಿ, ಕುಂಜಿಬೆಟ್ಟು, ಶ್ರೀಶಾರದಾ ಮಂಟಪದ ಜ್ಞಾನ ಮಂದಿರದಲ್ಲಿ ಜರುಗಿತು. ಸಂಘದ ಜೊತೆ ಕಾರ್ಯದರ್ಶಿ ಜಗದೀಶ್ ರಾವ್ ಪ್ರಾರ್ಥಿಸಿದರು. ಕಾರ್ಯದರ್ಶಿ ವರದಿ ವರ್ಷದಲ್ಲಿ ಅಗಲಿದ ಸಮಾಜದ ಹಿರಿಯರ ಕುರಿತು ತಿಳಿಸಿ ಒಂದು ನಿಮಿಷದ ಮೌನ ಪ್ರಾರ್ಥನೆಯೊಂದಿಗೆ ಸಭೆಯು ಶ್ರದ್ಧಾಂಜಲಿ ಅರ್ಪಿಸಿತು. 2021–22ನೇ ವಾರ್ಷಿಕ ವರದಿಯನ್ನು ಮಂಡಿಸಿ ಅಂಗೀಕಾರ ಪಡೆಯಲಾಯಿತು. 2021–22ನೇ ವರ್ಷದ ಆಯವ್ಯಯ ಆಸ್ತಿ ಜವಾಬ್ದಾರಿ ತಖ್ತೆಗಳ ಪರಿಶೋಧಿತ ವರದಿಯನ್ನು ಕೋಶಾಧಿಕಾರಿ ಗಣೇಶ ಹೆಬ್ಬಾರ್ ಮಂಡಿಸಿ ಅಂಗೀಕಾರ ಪಡೆದರು. 2022–23ನೇ ವರ್ಷದ ಅಂದಾಜು ಆಯವ್ಯಯ ಪಟ್ಟಿಯನ್ನು ಮಂಡಿಸಿ ಅಂಗೀಕಾರ ಪಡೆಯಲಾಯಿತು. ಶ್ರೀ ಶಾರದಾ ವಿಗ್ರಹ ನಿರ್ಮಾಣ ಹಾಗೂ ಸಭಾಂಗಣದ ಛಾವಣಿ ನವೀಕರಣಕ್ಕೆ ಸಭೆಯು ಅನುಮತಿ ನೀಡಿತು. ಲೆಕ್ಕ ಪರಿಶೋಧಕರಾಗಿ ವರ್ಷ ರಾವ್ ಹಾವಂಜೆ ಅವರನ್ನು ನೇಮಿಸಲಾಯಿತು. ಲಿಖಿತ ರೂಪದ ಪ್ರಶ್ನೆಗಳಿಗೆ ಅಧ್ಯಕ್ಷರಾದ ಮಂಜುನಾಥ ಹೆಬ್ಬಾರ್ ಉತ್ತರಿಸಿದರು. ಕಾರ್ಯದರ್ಶಿ ಪ್ರಭಾಕರ ಭಂಡಿಯವರ ಧನ್ಯವಾದದೊಂದಿಗೆ ಸಭೆಯು ಮುಕ್ತಾಯವಾಯಿತು.

### ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.), ಯುವ ವೇದಿಕೆ

ಶ್ರೀ ಶಾರದಾ ಮಂಟಪ, ಶ್ರೀ ಶಾರದಾ ನಗರ, ಕುಂಜಿಬೆಟ್ಟು, ಉಡುಪಿ

ನಮ್ಮ ಸಂಘದ ಯುವ ವೇದಿಕೆಯ ವತಿಯಿಂದ ನಮ್ಮ ಸಮಾಜ ಬಾಂಧವರಿಗೆ
ದಿನಾಂಕ 04–12–2022ನೇ ರವಿವಾರದಂದು ಬೆಳಿಗ್ಗೆ 9–00ಕ್ಕೆ
ಎಂ.ಜಿ.ಎಂ. ಕಾಲೇಜು, ಉಡುಪಿ ಇದರ ಕ್ರೀಡಾಂಗಣದಲ್ಲಿ

**ಶ್ರೀ ಶಾರದಾ ಟ್ರೋಫಿ ಕ್ರಿಕೆಟ್ ಪಂದ್ಯಾಟ**

ಏರ್ಪಡಿಸಲಾಗಿದೆ.

ಬಹುಮಾನಗಳ ಪ್ರಾಯೋಜಕರು :

-ಪ್ರಥಮ ಬಹುಮಾನ : ರೂ.12,000/- ಶ್ರೀ ಆಲೆವೂರು ಶ್ಯಾಮರಾಯರು ತಮ್ಮ ಮಾತಾಪಿತರಾದ ದಿ। ಶಾಂತಾ ಹಾಗೂ ದಿ। ಭುಜಂಗರಾಯರ ಸ್ಮರಣಾರ್ಥ
-ದ್ವಿತೀಯ ಬಹುಮಾನ : ರೂ.8,000/- ಶ್ರೀಮತಿ ಸುನಂದ ಹಾಗೂ ಶ್ರೀ ಸಿ.ಎಸ್.ರಾವ್, ಚಿಟ್ಪಾಡಿ
-ಸಮಾಧಾನಕರ ಬಹುಮಾನ : ಒಟ್ಟು ರೂ.6,000/- ಶ್ರೀ ವೈ. ಭುವನೇಂದ್ರ ರಾಯರು ತಮ್ಮ ಮಾತಾಪಿತರಾದ ದಿ। ಗಿರಿಜಮ್ಮ ಹಾಗೂ ದಿ। ಎಲ್ಲೂರು ಲಕ್ಷ್ಮೀನಾರಾಯಣ ರಾವ್ ಜ್ಯೋತಿಷ್ಕರ ಸ್ಮರಣಾರ್ಥ
-ಉತ್ತಮ ಬೌಲರ್, ಬ್ಯಾಟ್ಸ್‌ಮನ್ ಮತ್ತು ಆಲ್‌ರೌಂಡರ್ ಪುರಸ್ಕಾರ : ಒಟ್ಟು ರೂ.6,000/-, ಶ್ರೀ ಬಿ. ಜಯರಾಮ ರಾವ್

**ಮಹಿಳೆಯರ ತ್ರೋಬಾಲ್ ಪಂದ್ಯಾಟ**

-ಪ್ರಥಮ ಬಹುಮಾನ : ರೂ.5,000/-
-ದ್ವಿತೀಯ ಬಹುಮಾನ : ರೂ.3,000/-
} ಶ್ರೀಮತಿ ಸುಕನ್ಯಾ ಮತ್ತು ಶ್ರೀ ಸತೀಶ್ ರಾವ್, ಚಿಟ್ಪಾಡಿ

**ಇದೇ ದಿನ 10ನೇ ತರಗತಿಯವರೆಗಿನ ಮಕ್ಕಳಿಗೆ ಕ್ರಿಕೆಟ್‌ಪಂದ್ಯಾಟ ನಡೆಯಲಿದೆ.**

ಕ್ರಿಕೆಟ್ ಪಂದ್ಯಾಟಕ್ಕೆ ಪ್ರಾಯೋಜಕರಾಗಿ, ದಾನಿಗಳಾಗಿ ಸಹಕರಿಸುವವರು ಸಂಘದ ಅಧ್ಯಕ್ಷರು ಹಾಗೂ ಕಾರ್ಯದರ್ಶಿಯವರನ್ನು ಮುಂಚಿತವಾಗಿ ಸಂಪರ್ಕಿಸಬಹುದು.

### ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.), ಮಹಿಳಾ ವೇದಿಕೆ

ಶ್ರೀ ಶಾರದಾ ಮಂಟಪ, ಶ್ರೀ ಶಾರದಾ ನಗರ, ಕುಂಜಿಬೆಟ್ಟು, ಉಡುಪಿ

ತಾ.04-12-2022ನೇ ಆದಿತ್ಯವಾರ ಬೆಳಿಗ್ಗೆ ಗಂಟೆ 9-00ರಿಂದ

ಮಹಿಳೆಯರು ಮತ್ತು ಮಕ್ಕಳಿಗಾಗಿ ಶ್ರೀ ಶಾರದಾ ಮಂಟಪದಲ್ಲಿ
**ವಿವಿಧ ಒಳಾಂಗಣ ಕ್ರೀಡಾ ಸ್ಪರ್ಧೆ**ಗಳನ್ನು
ಹಾಗೂ ಅಪರಾಹ್ನ 2ರಿಂದ ಎಮ್.ಜಿ.ಎಮ್. ಕ್ರೀಡಾಂಗಣದಲ್ಲಿ
**ತ್ರೋಬಾಲ್ ಪಂದ್ಯಾಟ**ವನ್ನು ಏರ್ಪಡಿಸಲಾಗಿದೆ.

ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕಾಗಿ ವಿನಂತಿ

ಆಸಕ್ತ ತಂಡಗಳು ಸಂಘದ ಜೊತೆಕಾರ್ಯದರ್ಶಿ ವಿನೋದ್‌ಕುಮಾರ್ (8310966892), ಇವರಲ್ಲಿ ತಮ್ಮ ತಂಡದ ಹೆಸರನ್ನು ದಿನಾಂಕ 26-11-2022ರ ಒಳಗೆ ನೋಂದಾಯಿಸಿಕೊಳ್ಳಬೇಕಾಗಿ ವಿನಂತಿ – ಆಡಳಿತ ಮಂಡಳಿ

# ಉಡುಪಿ ಶ್ರೀ ಶಾರದಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಮಹಾಸಭೆ



ಶ್ರೀ ಶಾರದಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿಯು 2021-22ನೇ ಸಾಲಿನ ವಾರ್ಷಿಕ ಮಹಾಸಭೆ ಭೂವರಾಹ ಸಂಕೀರ್ಣದ ಸಭಾಂಗಣದಲ್ಲಿ ನಡೆಯಿತು. ಸಂಘದ ಅಧ್ಯಕ್ಷರಾದ ಎಂ. ಸದಾನಂದ ರಾವ್ ಅಧ್ಯಕ್ಷತೆವಹಿಸಿ, ವರದಿ ಸಾಲಿನ ಅಂತ್ಯಕ್ಕೆ ಸದಸ್ಯರಿಂದ 26.35 ಲಕ್ಷ ರೂ. ಪಾಲು ಬಂಡವಾಳ, 23.80 ಕೋಟಿ ರೂ. ಠೇವಣಿ ಸಂಗ್ರಹಿಸಿದ ಸಂಘವು 19.46 ಕೋಟಿ ರೂ. ಸಾಲ ವಿತರಿಸಿದೆ. 32.14 ಲಕ್ಷ ರೂ. ನಿವ್ವಳ ಲಾಭಗಳಿಸಿದ ಸಂಘವು ಸದಸ್ಯರಿಗೆ ಶೇ 12 ಡಿವಿಡೆಂಡ್ ಘೋಷಿಸಿದೆ ಎಂದು ತಿಳಿಸುತ್ತಾ ಆಗಮಿಸಿದ ಎಲ್ಲರನ್ನೂ ಸ್ವಾಗತಿಸಿದರು. ಉಪಾಧ್ಯಕ್ಷ ಯು. ಅರವಿಂದ ಕುಮಾರ್, ನಿರ್ದೇಶಕರಾದ ಕೃಷ್ಣಕುಮಾರ್ ರಾವ್, ಬಿ. ಜಯರಾಮ ರಾವ್, ವೈ. ಮೋಹನ ರಾವ್, ಕೆ. ಗಣೇಶ ರಾವ್, ಬಿ. ಕೃಷ್ಣಮೂರ್ತಿ ರಾವ್, ವೈ. ವಿಠಲ ರಾವ್, ಎಂ. ಪದ್ಮಾನಂದ ರಾವ್, ವೈ ಪ್ರಕಾಶ್ ಕುಮಾರ್, ಹರಿಣಾಕ್ಷಿ ಎನ್. ರಾವ್., ವೇದಾವತಿ ಜಿ. ರಾವ್, ಸಲಹೆಗಾರರಾದ ಎಂ.ಕೆ. ದಿವಾಕರ ರಾವ್, ಉದಯ ಬಿ. ರಾವ್, ಉಪಸ್ಥಿತರಿದ್ದರು. ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಶೇಕಡಾ 85% ಹೆಚ್ಚು ಅಂಕಗಳಿಸಿದ ಸದಸ್ಯರ ಮಕ್ಕಳಿಗೆ ವಿದ್ಯಾರ್ಥಿವೇತನ ವಿತರಿಸಲಾಯಿತು. ಕಾರ್ಯದರ್ಶಿ ಎನ್. ಪಟ್ಟಾಭಿರಾಮ ರಾವ್ ಲೆಕ್ಕಪತ್ರ ವಾಚಿಸಿದರು ಹಾಗೂ ಕಾರ್ಯಕ್ರಮವನ್ನು ನಿರೂಪಿಸಿದರು. ಶಾಲಾ ವ್ಯವಸ್ಥಾಪಕಿ ಭಾರತಿ ಎಸ್. ರಾವ್ ಪ್ರಾರ್ಥನೆ ಮಾಡಿ, ವ್ಯವಸ್ಥಾಪಕಿ ಸೌಮ್ಯಲತಾ ವಂದಿಸಿದರು.


**ಸಂಪಾದಕ ಮಂಡಳಿ**

ಶ್ರೀ ಯು. ಅರವಿಂದ ಕುಮಾರ್
ಶ್ರೀ ಸುರೇಶ್ ಶ್ಯಾನುಭಾಗ್, ಇಂದ್ರಾಳಿ
ಶ್ರೀ ಟಿ. ಸುರೇಶ್ ರಾವ್, ನಿಟ್ಟೂರು
ಶ್ರೀ ಮಧುಸೂಧನ ರಾವ್ ಕುಂಜಾರುಗಿರಿ
ಡಾ। ಶ್ರೀಮತಿ ವಿಜಯ ರಾವ್ ವೈ.ಬಿ.

★★★★ ★★★★


ಸಲಹೆಗಾರರು :
ಶ್ರೀ ವೈ. ಭುವನೇಂದ್ರ ರಾವ್, ಕೊರಂಗ್ರಪಾಡಿ
ಶ್ರೀ ಕೆ. ವೇಣುಗೋಪಾಲರಾವ್, ಅಂಬಲಪಾಡಿ


# ಹೆಬ್ಬಾರ ಸ್ಥಾನಿಕ ಬ್ರಾಹ್ಮಣ ಸಂಘ ಕಬ್ಬಿನಾಲೆ : ಉದ್ಘಾಟನೆ



ಬ್ರಾಹ್ಮಣ್ಯ ಪರಿಪಾಲನೆಗೆ ನಿಗದಿತ ಅನುಷ್ಠಾನ, ನಿಯಮಿತ ಸಾತ್ವಿಕ ಆಹಾರ ಸೇವನೆ, ಸರ್ವರಿಗೂ ಒಪ್ಪಿಗೆಯಾಗುವಂತಹ ಮಿತ ಮಾತು ಅಗತ್ಯ ಎಂದು ಶೃಂಗೇರಿ ಕೇಂದ್ರೀಯ ಸಂಸ್ಕೃತ ವಿವಿಯ ಪ್ರಾಧ್ಯಾಪಕ ಪ್ರೊ. ಹರಿಪ್ರಸಾದ ಹೆಬ್ಬಾರ್ ಹೇಳಿದರು. ಕಬ್ಬಿನಾಲೆ ಲಕ್ಷ್ಮೀನಾರಾಯಣ ದೇವರ ಸನ್ನಿಧಿಯಲ್ಲಿ ನಡೆದ ಹೆಬ್ಬಾರ ಸ್ಥಾನಿಕ ಬ್ರಾಹ್ಮಣ ಸಂಘದ ನೂತನ ಘಟಕ ಉದ್ಘಾಟನೆ ಸಮಾರಂಭದಲ್ಲಿ ಬ್ರಾಹ್ಮಣ್ಯ ಕುರಿತು ಅವರು ವಿಶೇಷ ಉಪನ್ಯಾಸ ನೀಡಿದರು. ಮಂಗಳೂರಿನ ಸ್ಥಾನಿಕ ಬ್ರಾಹ್ಮಣ ಮಹಾಮಂಡಲದ ಅಧ್ಯಕ್ಷ ಬೆಳುವಾಯಿ ದೇವಾನಂದ ಭಟ್ ನೂತನ ಘಟಕವನ್ನು ಉದ್ಘಾಟಿಸಿದರು. ಮಹಾಮಂಡಲದ ಸ್ಥಾಪಕಾಧ್ಯಕ್ಷ ನಿವೃತ್ತ ಬ್ಯಾಂಕ್ ಅಧಿಕಾರಿ ಚಿಟ್ಪಾಡಿ ಸರ್ವೋತ್ತಮ ರಾವ್ ಸಂಘದ ಮಹಾ ಪೋಷಕರಾಗಿ ಗೌರವ ಸನ್ಮಾನ ಸ್ವೀಕರಿಸಿದರು. ಸಂಘದ ಗೌರವಾಧ್ಯಕ್ಷ ಕೆ. ಜಗದೀಶ್ ಹೆಬ್ಬಾರ್ ಸಂಪಿಗೆ ಅಧ್ಯಕ್ಷತೆವಹಿಸಿದ್ದರು. ಉಡುಪಿ ಸ್ಥಾನಿಕ ಬ್ರಾಹ್ಮಣ ಸಂಘದ ಅಧ್ಯಕ್ಷ ಕುಚ್ಚೂರು ಮಂಜುನಾಥ ಹೆಬ್ಬಾರ್ ಉಪಸ್ಥಿತರಿದ್ದರು. ರಾಜ್ಯ ಸ್ಥಾನಿಕ ಬ್ರಾಹ್ಮಣ ಸಮಾಜದ ಪುರೋಹಿತರ ಸಂಘದ ಅಧ್ಯಕ್ಷ ಗುರುಪ್ರಸಾದ ಹೆಬ್ಬಾರ್ ಪಾಲ್ಗೊಂಡಿದ್ದರು.

ಸ್ಥಾನಿಕ ಸಮಾಜದ ಅಪೂರ್ವ ಪ್ರತಿಭಾನ್ವಿತೆ, ಒಂದನೆ ತರಗತಿಯಿಂದ 10ನೇ ತರಗತಿವರೆಗೆ ನಡೆದ ಎಲ್ಲಾ ಪರೀಕ್ಷೆಯಲ್ಲೂ ಎಲ್ಲಾ ವಿಷಯಗಳಲ್ಲೂ ಶೇ. 100 ಫಲಿತಾಂಶ ಪಡೆದ ಗುಳೇಲು ಶ್ರೀಜಾ ಆರ್. ಹೆಬ್ಬಾರ್ ಅವರನ್ನು ನಗದು ಪುರಸ್ಕಾರದೊಂದಿಗೆ ಹೆತ್ತವರ ಸಮ್ಮುಖ ಸನ್ಮಾನಿಸಲಾಯಿತು. ಎಸ್.ಎಸ್.ಎಲ್.ಸಿ. ಮತ್ತು ಪಿಯುಸಿ ವಿಭಾಗದಲ್ಲಿ ಅತೀ ಹೆಚ್ಚು ಅಂಕ ಪಡೆದ ಕಬ್ಬಿನಾಲೆಯ ಸ್ಥಾನಿಕ ಸಮಾಜದ ಪ್ರತಿಭಾನ್ವಿತರನ್ನು ನೆಲ್ಲಿಬೆಟ್ಟು ಜಯಂತಿ ಗೋವಿಂದ ಹೆಬ್ಬಾರ್



ಪ್ರಾಯೋಜಕತ್ವದಲ್ಲಿ ನಗದು ಪುರಸ್ಕಾರದೊಂದಿಗೆ ಗೌರವಿಸಲಾಯಿತು.

ಕಾರ್ಕಳ ಶಂಕರ ಪ್ರತಿಷ್ಠಾನದ ಮುರಳೀಧರ ಶರ್ಮ, ಕರ್ನಾಟಕ ಬ್ಯಾಂಕ್‌ನ ನಿವೃತ್ತ ಅಧಿಕಾರಿ ಚಂದ್ರಶೇಖರ ರಾವ್, ಕುಂದಾಪುರ ತಾಲೂಕು ಸಂಘದ ಮಾಜಿ ಅಧ್ಯಕ್ಷ ಅಬ್ಲಿಕಟ್ಟೆ ಗೋಪಾಲ ಹೆಬ್ಬಾರ್, ಪಿ. ಪ್ರಭಾಕರ ಭಂಡಿ, ಅಂತರಾಷ್ಟ್ರೀಯ ಕ್ರೀಡಾಪಟು ವೈ. ಕುಮಾರಸ್ವಾಮಿ ಭಾಗವಹಿಸಿದ್ದರು. ಸಂಘದ ಅಧ್ಯಕ್ಷ ಕೆ. ಸೀತಾರಾಮ ಹೆಬ್ಬಾರ್ ಸ್ವಾಗತಿಸಿದರು. ಕಾಪೋಳಿ ಶ್ರೀಧರ ಹೆಬ್ಬಾರ್, ನೇತ್ರಾವತಿ ಹೆಬ್ಬಾರ್ ನಿರೂಪಿಸಿದರು. ಕಾರ್ತಿಕ್ ಹೆಬ್ಬಾರ್ ವಂದಿಸಿದರು.

# ಶ್ರೀಮತಿ ರಾಜೇಶ್ವರಿ ಕೆ ಇವರಿಗೆ ದ.ಕ.ಜಿಲ್ಲಾ ಮಟ್ಟದ ಉತ್ತಮ ಶಿಕ್ಷಕಿ ಪ್ರಶಸ್ತಿ



ಕರ್ನಾಟಕ ಸರಕಾರ ಜಿಲ್ಲಾಡಳಿತ ಹಾಗೂ ಜಿಲ್ಲಾ ಪಂಚಾಯಿತಿ ದಕ್ಷಿಣ ಕನ್ನಡ ಶಿಕ್ಷಕರ ಕಲ್ಯಾಣ ನಿಧಿ ಬೆಂಗಳೂರು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಉಪನಿರ್ದೇಶಕರ ಕಛೇರಿ ಮಂಗಳೂರು ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿ ಪುತ್ತೂರು ಇವರ ಸಹಯೋಗದಿಂದ ದಕ್ಷಿಣ ಕನ್ನಡ ಜಿಲ್ಲಾ ಮಟ್ಟದ ಶಿಕ್ಷಕರ ದಿನಾಚರಣೆಯ ಅಂಗವಾಗಿ ಸೋಮವಾರ ತಾ.05.09.2022 ರಂದು ಪುತ್ತೂರಿನ ವಿವೇಕಾನಂದ ಆಂಗ್ಲ ಮಾಧ್ಯಮ ಶಾಲೆಯಲ್ಲಿ ನಡೆದ ಸಮಾರಂಭದಲ್ಲಿ 2022-23ನೇ ಶೈಕ್ಷಣಿಕ ವರ್ಷದ ಪ್ರೌಢಶಾಲಾ ವಿಭಾಗದಲ್ಲಿ ಕೆನರಾ ಪ್ರೌಢಶಾಲೆ ಡೊಂಗರಕೇರಿ ಮಂಗಳೂರಿನ ಚಿತ್ರಕಲಾ ಶಿಕ್ಷಕಿ ರಾಜೇಶ್ವರಿ ಕೆ. ಇವರಿಗೆ ಜಿಲ್ಲಾ ಮಟ್ಟದ ಉತ್ತಮ ಶಿಕ್ಷಕಿ ಪ್ರಶಸ್ತಿಯನ್ನು ನೀಡಿ ಗೌರವಿಸಿದ್ದಾರೆ.


**ಶ್ರೀ ಶಾರದಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ (ನಿ.)**

ಎಲ್.ನಂ.31017, ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ - 576 101. ಫೋನ್ : 2522408

ನಿಮ್ಮ ಕನಸಿನ ಮನೆ ಸಾಕಾರಗೊಳಿಸಿ
"ಗೃಹ ಸಾಲ"
ಸಂಘದ ಪ್ರಾಥಮಿಕ ಸದಸ್ಯರಿಗೆ 10.00%
(ಷರತ್ತುಗಳು ಅನ್ವಯ)

| | | |
|---|---|---|
| ಗೃಹ ಸಾಲ | : | 10% |
| ವಾಹನ ಸಾಲ | : | 12.5% |
| ಹಳೆಯ ವಾಹನ | : | 15% |
| ಆಭರಣ ಸಾಲ | : | 12% |
| ವೈಯಕ್ತಿಕ ಸಾಲ | : | 16% |
| ಶಿಕ್ಷಣ ಸಾಲ | : | 12% |
| ಅಡಮಾನ ಸಾಲ | : | 11.5% |

ಆಭರಣ ಸಾಲಕ್ಕೆ ಯಾವುದೇ ಸೇವಾ ಶುಲ್ಕ, ತೆರಿಗೆ ಇರುವುದಿಲ್ಲ.

**ಠೇವಣೆಗಳ ಬಡ್ಡಿದರ**

| | | | |
|---|---|---|---|
| ಉಳಿತಾಯ ಖಾತೆ | : 5% | ನಿತ್ಯನಿಧಿ ಠೇವಣಿ | : 5% |
| 46 ದಿನಗಳಿಂದ 364 ದಿನಗಳು | : 6%, | 1 ವರ್ಷ ಮತ್ತು ಹೆಚ್ಚಿನ ಅವಧಿಗೆ | : 8.5% |

(ಹಿರಿಯ ನಾಗರಿಕರಿಗೆ/ಸಂಘ ಸಂಸ್ಥೆಗಳಿಗೆ 1 ವರ್ಷಕ್ಕಿಂತ ಹೆಚ್ಚಿನ ಅವಧಿಯ ಠೇವಣೆಗಳಿಗೆ 0.5% ಹೆಚ್ಚಿಗೆ ನೀಡಲಾಗುವುದು)

2011-12ರಿಂದ 2016-17ನೇ ವರ್ಷದ ವರೆಗಿನ ಲಾಭಾಂಶವನ್ನು ಪಡೆದುಕೊಳ್ಳದಿರುವ ಸದಸ್ಯರು ಸಂಘದ ವ್ಯವಹಾರದ ಸಮಯದಲ್ಲಿ ಬಂದು ಪಡೆದುಕೊಳ್ಳಬಹುದು. ಅಥವಾ ತಮ್ಮ ಹೆಸರಿನಲ್ಲಿ ಉಳಿತಾಯ ಖಾತೆಯನ್ನು ತೆರೆದಲ್ಲಿ ಪ್ರತಿ ವರ್ಷದ ಲಾಭಾಂಶವನ್ನು ಉಳಿತಾಯ ಖಾತೆಗೆ ಜಮೆ ಮಾಡಲಾಗುವುದು.

**ನಿಮ್ಮ ಹತ್ತಿರದ ಶಾಖೆಯನ್ನು ಇಂದೇ ಸಂಪರ್ಕಿಸಿರಿ**

ಪ್ರಧಾನ ಕಛೇರಿ (☎ 2522408) ಪಡುಬಿದ್ರಿ ಶಾಖೆ (☎ 2556608) ಕೋಟೇಶ್ವರ ಶಾಖೆ (☎ 9341854114) ಬ್ರಹ್ಮಾವರ ಶಾಖೆ (☎ 2003456)
ಕುಕ್ಕಿಕಟ್ಟೆ ಶಾಖೆಯನ್ನು ಪ್ರಧಾನ ಕಛೇರಿಯೊಂದಿಗೆ ವಿಲೀನಗೊಳಿಸಲಾಗಿರುತ್ತದೆ. ಗ್ರಾಹಕ ಸದಸ್ಯರು ಸಹಕರಿಸಬೇಕಾಗಿ ವಿನಂತಿ





**Dr. Sanath S. Rao**
M.B.B.S., M.D.(Derm, Vene, Lep)
Fellow Cosmetology (St. John's Hospital)
SKIN SPECIALIST & COSMETOLOGIST

Clinic : 0820-6529474
Mobile : 9886093199
drsanathrao@gmail.com

**JALAJA SKIN CLINIC**

1ST FLOOR, SAI HARSHA SQUARE, KOLADAPETE (THENKAPETE),
OLD POST OFFICE ROAD, UDUPI - 576 101.
Visit us at : www.jalajaskincare.com
Timings : 9-30 a.m. to 2-00 p.m., 4-30 p.m. to 8-00 p.m.





ಡಾ। ವಿಜಯಾ ರಾವ್ ವೈ.ಬಿ
ಹೆರಿಗೆ ಹಾಗೂ ಸ್ತ್ರೀರೋಗ ತಜ್ಞರು

**Dr. Vijaya Rao Y.B.**
MBBS DGO (DNB)
Consultant Obst. & Gynaecologist
Reg. No. 34499
Mobile : 9481230608
Email : vijayayb12@gmail.com

Indrani Maternity Clinic, Aisiri Complex,
Near Railway Station Bus Stop, Kunjibettu Post, Udupi - 576 102

## ಉಡುಪಿಯಲ್ಲಿ ಸಂಭ್ರಮದ ನವರಾತ್ರಿ ಹಬ್ಬ

■...1ನೇ ಪುಟದಿಂದ

ಶ್ರೀ ಸತೀಶ್ ಭಟ್ ಮೊದಲಾದ ವೈದಿಕರ ಮುಂದಾಳತ್ವದಲ್ಲಿ ಸಾಂಗವಾಗಿ ನೆರವೇರಿತು. ಸಂಘದ ನಿರ್ದೇಶಕರಾದ ಚಿಟ್ಪಾಡಿ ಶ್ರೀ ಸತೀಶ್ ರಾವ್ ಮತ್ತು ಶ್ರೀಮತಿ ಸುಕನ್ಯಾ ದಂಪತಿಗಳು ಯಾಗಕತೃಗಳಾಗಿ ಸಹಕರಿಸಿದ್ದರು. ಮಧ್ಯಾಹ್ನ 12ಗಂಟೆಗೆ ಸರಿಯಾಗಿ ಯಾಗದ ಪೂಜೆ ಮತ್ತು ಪೂರ್ಣಾಹುತಿಯೊಂದಿಗೆ ಚಂಡಿಕಾಯಾಗ ಸಂಪನ್ನಗೊಂಡಿತು. ನಂತರ ಶ್ರೀ ಶಾರದಾ ದೇವಸ್ಥಾನದಲ್ಲಿ ಮಧ್ಯಾಹ್ನದ ಮಹಾಪೂಜೆ ನೆರವೇರಿತು. ನಂತರ ನಡೆದ ಪ್ರಸಾದ ಭೋಜನದಲ್ಲಿ ಸಾವಿರಕ್ಕಿಂತಲೂ ಹೆಚ್ಚು ಭಕ್ತ ಬಾಂಧವರು ಪ್ರಸಾದ ಸ್ವೀಕರಿಸಿದರು.

**ಸಭಾ ಕಾರ್ಯಕ್ರಮ :** ಊಟದ ನಂತರ ನಡೆದ ಸಭಾ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಮಾತನಾಡಿದ ಕಾಸರಗೋಡು ಉಪ್ಪಳದ ಶ್ರೀ ಸೋಮನಾಥ ದೇವಸ್ಥಾನದ ಆಡಳಿತ ಮಂಡಳಿಯ ಗೌರವಾಧ್ಯಕ್ಷರಾದ ಉಡುಪಿ ಸಂತೆಕಟ್ಟೆಯ ಡಾ। ರಮೇಶ್ ರಾವ್ ಚೆಂಡುಕಳ ಈಗಿನ ಆಡಳಿತ ಮಂಡಳಿಯ ಹಲವಾರು ಸುಧಾರಣಾ ಕಾರ್ಯಕ್ರಮಗಳನ್ನು ಶ್ಲಾಘಿಸಿದ್ದಲ್ಲದೆ, ಅವರು ನಡೆಸುವ ಈ ಉತ್ಸವ ಕಾರ್ಯಗಳಿಗೆ ಸಮಾಜ ಬಾಂಧವರು ಒಳ್ಳೆಯ ಸಹಕಾರವನ್ನು ನೀಡಿ ಪ್ರೋತ್ಸಾಹಿಸಬೇಕೆಂದು ವಿನಂತಿಸಿದರು. ಅಂದಿನ ಸೇವಾ ಕತೃಗಳಾಗಿದ್ದ ಶ್ರೀ ಸತೀಶ್ ರಾವ್ ವೇದಿಕೆಯಲ್ಲಿದ್ದು ತಾವೂ ಹಿಂದೆ ವಿದ್ಯಾರ್ಥಿಯಾಗಿದ್ದಾಗ ಸಂಘದಿಂದ ಸಾಲ ವಿದ್ಯಾರ್ಥಿವೇತನವನ್ನು ಪಡೆದಿದ್ದು, ಅದನ್ನು ಕ್ಲಪ್ತ ಸಮಯದಲ್ಲಿ ಹಿಂದೆ ಪಾವತಿಸಿದ್ದೇನೆ. ಆದರೂ ಸಂಘದ ಫಲಾನುಭವಿಯಾದ ನಮಗೆ ಋಣ ತೀರಿಸುವ ಸಮಯ ಶ್ರೀ ದೇವರು ಕರುಣಿಸಿದಲ್ಲಿ ನಾವು ಸಂಘಕ್ಕೆ ಸಹಾಯ ಮಾಡುವ ಮನೋಭಾವ ಹೊಂದೋಣ ಎಂದರು. ಉಡುಪಿಯ ಸ್ಥಾನಿಕ ಬ್ರಾಹ್ಮಣ ಸಂಘದ ಅಧ್ಯಕ್ಷ ಶ್ರೀ ಮಂಜುನಾಥ ಹೆಬ್ಬಾರ್ ಪ್ರಾಸ್ತಾವಿಕ ಮಾತನಾಡಿ ಎಲ್ಲರನ್ನು ಸ್ವಾಗತಿಸಿದರು. ಸಭೆಯಲ್ಲಿ ಉದಯಚಂದ್ರ ಪ್ರತಿಭಾ ಪುರಸ್ಕಾರ, ಅಂಬಲಪಾಡಿ ಕೃಷ್ಣರಾವ್ ಸ್ಮಾರಕ ಪ್ರತಿಭಾ ಪುರಸ್ಕಾರ, ಹಿಮಾಂಶು ಸ್ಮಾರಕ ದತ್ತಿನಿಧಿ ಪ್ರತಿಭಾ ಪುರಸ್ಕಾರ, ವಾರ್ಷಿಕ ವಿದ್ಯಾರ್ಥಿವೇತನ ಮೊದಲಾದುವುಗಳನ್ನು ಅರ್ಹರಾದವರಿಗೆ ವಿತರಿಸಲಾಯಿತು. ಅಂದು ನಡೆದ ಸಾಂಸ್ಕೃತಿಕ ಸ್ಪರ್ಧೆಗಳ ಬಹುಮಾನ ವಿತರಣೆ ಮಾಡಲಾಯಿತು. ಬಹುಮಾನಿತರ ಪಟ್ಟಿಯನ್ನು ನಿರ್ದೇಶಕ ಕೃಷ್ಣಮೂರ್ತಿ ಬ್ರಹ್ಮಾವರ ವಾಚಿಸಿದರು. ಸಂಘದ ಕೋಶಾಧಿಕಾರಿ ಶ್ರೀ ಗಣೇಶ್ ಹೆಬ್ಬಾರ್ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಕಾರ್ಯದರ್ಶಿ ಶ್ರೀ ಪ್ರಭಾಕರ ಭಂಡಿ ವಂದಿಸಿದರು. ನಿರ್ದೇಶಕ ಶ್ರೀ ಕೃಷ್ಣಕುಮಾರ್ ರಾವ್ ಮಟ್ಟು ಪ್ರತಿಭಾ ಪುರಸ್ಕಾರ, ದತ್ತಿನಿಧಿ, ವಿದ್ಯಾರ್ಥಿವೇತನ ಮೊದಲಾದುವುಗಳ ಬಗ್ಗೆ ವಿವರಣೆಯನ್ನು ನೀಡಿ ಕಾರ್ಯಕ್ರಮ ನಿರ್ವಹಣೆ ಮಾಡಿದರು.

**ಸಾಂಸ್ಕೃತಿಕ ಕಾರ್ಯಕ್ರಮ :** ಸಭಾಕಾರ್ಯಕ್ರಮದ ನಂತರ ಸಂಘದ ಮಹಿಳಾ ವೇದಿಕೆಯು ಆಯೋಜಿಸಿದ್ದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಕು। ದ್ಯುತಿ ಹೆಬ್ಬಾರ್ ಬೆಂಗಳೂರು, ಕು। ಸ್ತುತಿ ಸುಪ್ರೀತ್ ಪರ್ಕಳ, ಕು। ಸಾನಿಧ್ಯ ಬೆಂಗಳೂರು ಮತ್ತು ಸಂಘದ ಮಹಿಳಾವೇದಿಕೆಯ ಸದಸ್ಯರಿಂದ ನೃತ್ಯ ಪ್ರದರ್ಶನ ಗೊಂಡಿತು. ನಂತರ ಶ್ರೀ ಶಾರದಾ ಹವ್ಯಾಸಿ ಯಕ್ಷಗಾನ ಕಲಾವಿದರಿಂದ ಸುದರ್ಶನ–ಸುದರ್ಶನ–ಸುದರ್ಶನ ಯಕ್ಷಗಾನ ಪ್ರಸಂಗವು ಪ್ರದರ್ಶಿಸಲ್ಪಟ್ಟಿತು.

**ವಿದ್ಯಾರ್ಥಿವೇತನ– ಪ್ರತಿಭಾ ಪುರಸ್ಕಾರ ವಿತರಣೆ**

**ಉದಯಚಂದ್ರ ಪ್ರತಿಭಾ ಪುರಸ್ಕಾರ :** 10ನೇ ತರಗತಿ ವಿಭಾಗ–ಈ ವರ್ಷ ನಮ್ಮ ಸಮಾಜದ ಇಬ್ಬರು ವಿದ್ಯಾರ್ಥಿಗಳು ರಾಜ್ಯ ಮಟ್ಟದಲ್ಲಿ 625ರಲ್ಲಿ 625 ಅಂಕಪಡೆದಿದ್ದು ಉದಯ ಚಂದ್ರ ಪ್ರತಿಭಾ ಪುರಸ್ಕಾರ ವಿಜೇತರಾಗಿದ್ದಾರೆ.

**1. ಕು। ಧನ್ಯಶ್ರೀ**

ಶ್ರೀ ರವಿ ಪ್ರಕಾಶ್ & ಶ್ರೀಮತಿ ಮಮತಾ, ಲಕ್ಷ್ಮೀನಿವಾಸ, ಸುಬ್ರಹ್ಮಣ್ಯ ದೇವಸ್ಥಾನದ ಬಳಿ, ಪಾದೆಬೆಟ್ಟು ಪಡುಬಿದ್ರೆ. (ಜೇಸೀ ಆಂಗ್ಲ ಮಾಧ್ಯಮ ಪ್ರೌಢ ಶಾಲೆ, ವಿಟ್ಲ, ದ.ಕ. ಇದರ ವಿದ್ಯಾರ್ಥಿ)

**2. ಕು। ಅವನಿ ಕೆ.**

ಶ್ರೀ ನಿತಿನ್ ಕುಮಾರ್ ಕೆ. & ಶ್ರೀಮತಿ ಅಕ್ಷತಾ ರಾವ್, "ನವನೀತ", ನೆಹರೂ ಹೈಸ್ಕೂಲ್ ಬಳಿ ಅಲೆವೂರು, ಉಡುಪಿ. (ಹೋಲಿಚೈಲ್ಡ್ ಆಂಗ್ಲ ಮಾಧ್ಯಮ ಪ್ರೌಢ ಶಾಲೆ, ಬೆಂಗಳೂರು ಇದರ ವಿದ್ಯಾರ್ಥಿ)

ಪದವಿ ಪೂರ್ವ ವಿಭಾಗ

**ವಿಜ್ಞಾನ : ಕೆ ಕೌಶಿಕ್(590/600)**

ಶ್ರೀ ಕೆ ಚಿತ್ತರಂಜನ್ ರಾವ್ & ಶ್ರೀಮತಿ ಸಂಧ್ಯಾ ಸಿ ರಾವ್, ಬಡೆಂಜ ಹೌಸ್, ರಾಮಕುಂಜ, ಕಡಬ, ದ.ಕ. (ಅಂಬಿಕಾ ಪದವಿ ಪೂರ್ವ ವಿದ್ಯಾಲಯ ಪುತ್ತೂರು, ದ.ಕ.ಇದರ ವಿದ್ಯಾರ್ಥಿ)

**ವಾಣಿಜ್ಯ : ಎಸ್ ಅನುರಾಜ್ (553/600)**

ಶ್ರೀ ಶಿವ ಕುಮಾರ್ & ಶ್ರೀಮತಿ ಮಮತಾ ಶಿವಕುಮಾರ್, ಶಿವಾಸ್ ಎಂಟರ್‌ಪ್ರೈಸಸ್ ಪಡುಬೆಳ್ಳೆ ಕಾಪು ತಾಲೂಕು (ಕ್ರಿಯೇಟಿವ್ ಪ್ರಿ ಯುನಿವರ್ಸಿಟಿ ಕಾಲೇಜು ಕಾರ್ಕಳ ಇದರ ವಿದ್ಯಾರ್ಥಿ)

**ಅಂಬಲಪಾಡಿ ಕೃಷ್ಣರಾವ್ ಸ್ಮಾರಕ ಪ್ರತಿಭಾ ಪುರಸ್ಕಾರ : ಕು। ದೀಕ್ಷಾ ಎಂ ಎಸ್**

ಡಾ। ಎಂ ಶ್ಯಾಮ್ ರಾವ್ & ಡಾ। ಸ್ವರ್ಣಲತಾ ರಾವ್ (ಎನ್ ಐ ಟಿ ಕೆ ಸುರತ್ಕಲ್ ಇದರ ವಿದ್ಯಾರ್ಥಿ) ಬಿ.ಟೆಕ್ (ಇ&ಸಿ) 2021 ರ ಘಟಿಕೋತ್ಸವದಲ್ಲಿ 2 ಚಿನ್ನದ ಪದಕಗಳೊಂದಿಗೆ ಪ್ರಥಮ ರ‍್ಯಾಂಕ್

**ಹಿಮಾಂಶು ಸ್ಮಾರಕ ದತ್ತಿ ನಿಧಿ ಪುರಸ್ಕಾರ : ಮಾನಸ**

ಶ್ರೀ ಮಂಜುನಾಥ ರಾವ್ & ಶ್ರೀಮತಿ ಸಹನಾ ಎಸ್ ರಾವ್, ಮಹಾಲಕ್ಷ್ಮೀ ನಿಲಯ, ವಿಷ್ಣುಮೂರ್ತಿ ದೇವಸ್ಥಾನದ ಬಳಿ, ಕೊರಂಗ್ರಪಾಡಿ ಉಡುಪಿ. (ಎಸ್ ಡಿ ಎಮ್ ಆಯುರ್ವೇದ ಕಾಲೇಜ್ ಕುತ್ಪಾಡಿ, ಉಡುಪಿ ಇಲ್ಲಿನ ಬಿ ಎ ಎಮ್ ಎಸ್ 4ನೇ ವರ್ಷದ ವಿದ್ಯಾರ್ಥಿನಿ)

ಇದಲ್ಲದೆ ವಿದ್ಯಾರ್ಥಿವೇತನಕ್ಕಾಗಿ ಬಂದಿರುವ ಅರ್ಜಿಗಳನ್ನು ಪರಿಶೀಲಿಸಲಾಗಿ ಅರ್ಹರಾದ 11 ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನವನ್ನು ವಿತರಿಸಿದೆ. ಉಳಿದ ಅರ್ಜಿ ಪರಿಶೀಲನೆಯಲ್ಲಿದ್ದು, ಅದಕ್ಕೆ ಬೇಕಾದ ಪೂರಕ ಮಾಹಿತಿಗಳನ್ನು ಸಂಗ್ರಹಿಸುತ್ತಿದ್ದೇವೆ. 2022ರ ಡಿಸೆಂಬರ್ 31ರ ಒಳಗೆ ವಿದ್ಯಾರ್ಥಿ ವೇತನಕ್ಕಾಗಿ ಬಂದಿರುವ ಎಲ್ಲಾ ಅರ್ಹ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನವನ್ನು ವಿತರಿಸುವ ಬಗ್ಗೆ ವಿದ್ಯಾರ್ಥಿವೇತನ ವೇದಿಕೆಯು ಕಾರ್ಯವೆಸಗುತ್ತಿದೆ. ಡಾ। ದಯಾನಂದ ರಾವ್ ಸಾಲ ವಿದ್ಯಾರ್ಥಿ ವೇತನಕ್ಕಾಗಿಯೂ ಅರ್ಜಿಗಳು ಬಂದಿದ್ದು, ಇನ್ನೂ ಹಲವು ಸ್ನಾತಕ ಹಾಗೂ ಸ್ನಾತಕೋತ್ತರ ತರಗತಿಗಳು ಪ್ರಾರಂಭ ವಾಗಬೇಕಾಗಿದೆ. ಆ ವಿದ್ಯಾರ್ಥಿಗಳಿಂದಲೂ ಅರ್ಜಿಗಳು ಬರುವ ನಿರೀಕ್ಷೆಯಲ್ಲಿದ್ದೇವೆ.

**ಸ್ಪರ್ಧೆಗಳು– ಬಹುಮಾನಿತರು :**

**ಚಿತ್ರ ರಚನೆ** (4ನೇ ತರಗತಿಯ ವರೆಗೆ) : 1. ಮಾನ್ವಿ ರಾವ್ 2. ಸಾನಿಧ್ಯ ಹೆಬ್ಬಾರ್ 3.ಸಾನ್ವಿ ರಾವ್

(5–8ನೇ ತರಗತಿಯವರೆಗೆ) : 1. ಆದ್ಯ ಹೆಬ್ಬಾರ್ 2. ವಿಭಾ ರಾವ್ 3.ಅದಿತಿ ಹೆಬ್ಬಾರ್

**ಭಕ್ತಿಗೀತೆ :** (4ನೇ ತರಗತಿಯವರೆಗೆ) : 1.ಮಾನ್ವಿ ರಾವ್ 2. ಸ್ತುತಿ ಸುಪ್ರೀತ್ 3. ದ್ಯುತಿ ಹೆಬ್ಬಾರ್, ಸಾನಿಧ್ಯ ರಾವ್

(5–8ನೇ ತರಗತಿಯವರೆಗೆ): ಸಮಾಧಾನಕರ ಬಹುಮಾನ – ಪರ್ಜನ್ಯ ರಾವ್, ವಿಭಾ ರಾವ್

(9 ರಿಂದ ಪದವಿ ಪೂರ್ವದವರೆಗೆ) ಸಮಾಧಾನಕರ ಬಹುಮಾನ – ಅಮಿತ್ ರಾವ್ ಕೆ

**ರಂಗವಲ್ಲಿ :** (5–8ನೇ ತರಗತಿಯವರೆಗೆ) ಸಮಾಧಾನಕರ ಬಹುಮಾನ – ಅನುಶ್ರೀ ರಾವ್, ಅದಿತಿ ಹೆಬ್ಬಾರ್

(9 ರಿಂದ ಪದವಿ ಪೂರ್ವದವರೆಗೆ) : 1. ಅದಿತಿ ರಾವ್ 2. ಶಮಾತ್ಮಿಕ ರಾವ್ 3. ಪಾವನ ಗಣೇಶ ರಾವ್

**ಕಂಠಪಾಠ** (4ನೇ ತರಗತಿಯವರೆಗೆ) ಸಮಾಧಾನಕರ ಬಹುಮಾನ – ಪ್ರಣವ್ ರಾವ್, ಮಾನ್ವಿ ರಾವ್

(5–8ನೇ ತರಗತಿಯವರೆಗೆ) : ಸಮಾಧಾನಕರ ಬಹುಮಾನ – ವಿಭಾ ರಾವ್, ಲಹರಿ ರಾವ್

**ಶಂಖ ಊದುವುದು :** (4ನೇ ತರಗತಿಯ ವರೆಗೆ) 1. ನಿಧಿ ಶರ್ಮಾ 2. ಸತೀಶ್ ರಾವ್ 3. ನಟರಾಜ ರಾವ್

**ಚೂರ್ಣಿಕೆ :** (4ನೇ ತರಗತಿಯವರೆಗೆ) 1. ಪರ್ಜನ್ಯ ಕೆ. ರಾವ್ 2. ಸುಮಂಗಲ ಹೆಬ್ಬಾರ್ 3. ಡಾ. ಶ್ಯಾಮ ರಾವ್

ಸಾಂಸ್ಕೃತಿಕ ಸ್ಪರ್ಧೆಗಳ ತೀರ್ಪುಗಾರರಾಗಿ ಸಹನಾಭಟ್ ಉಡುಪಿ ಧನ್ಯಶ್ರೀ ಭಟ್ ಉಡುಪಿ, ಸುದರ್ಶನ ರಾವ್ ಕಾಪು, ವೃಂದಾ ಕೆ.ರಾವ್, ಧರ್ಮಾವತಿ ರಾವ್ ಬಳ್ಕುಂಜೆ, ಜಯಂತಿ ಸತೀಶ್ ರಾವ್ ಉಡುಪಿ, ಪದ್ಮಶ್ರೀ ಹೆಬ್ಬಾರ್ ಮೊದಲಾದವರು ಸಹಕರಿಸಿದರು. ಕೃಷ್ಣಮೂರ್ತಿ ಬ್ರಹ್ಮಾವರ ಇವರ ಮೇಲ್ವಿಚಾರಣೆಯಲ್ಲಿ ನಡೆದ ಸ್ಪರ್ಧೆಗಳನ್ನು ಶ್ರೀ ಜಗದೀಶ ರಾವ್, ಶ್ರೀ ವ್ಯಾಸರಾವ್ ಕಲ್ಮಂಜೆ ಮೊದಲಾದವರು ನಡೆಸಿಕೊಟ್ಟರು.


**ಕೃತಜ್ಞತಾರ್ಪಣೆ :** ನವರಾತ್ರಿಯ ಪರ್ವಕಾಲದಲ್ಲಿ ಶ್ರೀ ಶಾರದಾ ಮಾತೆಯ ಪೂಜಾ ಸೇವೆಯಲ್ಲಿ ಪಾಲ್ಗೊಂಡ ಭಕ್ತ ಬಾಂಧವರೆಲ್ಲರಿಗೆ, ಪ್ರತಿದಿನ ದುರ್ಗಾ ನಮಸ್ಕಾರ ಸೇವೆ ಕೊಟ್ಟ ಮಹನೀಯರಿಗೆ, ಚಂಡಿಕಾ ಯಾಗದ ಕತೃಗಳಾಗಿ ಸಹಕರಿಸಿದ ಶ್ರೀ ಸತೀಶ್ ರಾವ್ ದಂಪತಿಗಳಿಗೆ, ಭಜನೆ ಹಾಗೂ ಕುಣಿತದ ಭಜನೆ ನಡೆಸಿಕೊಟ್ಟ ಎಲ್ಲ ತಂಡಗಳಿಗೆ, ಪೂಜಾ ಕಾರ್ಯಗಳಲ್ಲಿ ತೊಡಗಿಸಿಕೊಂಡ ವೈದಿಕ ತಂಡದವರಿಗೆ, ಶಾಂಕರ ತತ್ವ ಪ್ರಸಾರ ಅಭಿಯಾನದ ಎಲ್ಲ ಪದಾಧಿಕಾರಿಗಳಿಗೆ, ಸದಾ ನಮ್ಮೊಂದಿಗೆ ಅವಿರತವಾಗಿ ದುಡಿದ ಸ್ವಯಂಸೇವಕರಿಗೆ, ಆಗಮಿಸಿ ಸಲಹೆ ಸೂಚನೆ ನೀಡುತ್ತಾ ಸಹಕರಿಸಿದ ಭಕ್ತ ಬಂಧುಗಳಿಗೆ, ಸಂಘದ ಆಶಯದಂತೆ ಎಲ್ಲಾ ಕೆಲಸಕಾರ್ಯಗಳಲ್ಲಿ ಕೈಜೋಡಿಸಿದ ಸಂಘದ ವಿವಿಧ ವೇದಿಕೆಗಳಿಗೆ, ವಿವಿಧ ಸ್ಪರ್ಧೆಗಳನ್ನು ನಡೆಸಿ ಕೊಟ್ಟ ನಿರ್ವಾಹಕರಿಗೆ, ತೀರ್ಪುಗಾರರಾಗಿ ಸಹಕರಿಸಿದ ಮಹನೀಯರಿಗೆ, ಭಾಗವಹಿಸಿದ ಎಲ್ಲಾ ಸ್ಪರ್ಧಾಳುಗಳಿಗೆ, ಸಾಂಸ್ಕೃತಿಕ ಕಾರ್ಯಕ್ರಮ ನಡೆಸಿಕೊಟ್ಟ ಬಂಧುಗಳಿಗೆ, ಶ್ರೀ ಶಾರದಾ ಹವ್ಯಾಸಿ ಯಕ್ಷಗಾನ ಕಲಾವಿದರು ತಂಡದ ಎಲ್ಲಾ ಕಲಾವಿದರಿಗೆ, ಸದಸ್ಯರಿಗೆ, ಶ್ರೀ ಶಾರದಾ ಮಂಟಪದ ಮೆನೇಜರ್‌ಗಳು ಹಾಗೂ ಸಿಬ್ಬಂದಿ ವರ್ಗಕ್ಕೆ, ನಮ್ಮ ಎಲ್ಲಾ ನಿರ್ದೇಶಕರಿಗೆ ಹಾಗೂ ಸಲಹೆಗಾರರಿಗೆ, ಎಲ್ಲಾ ರೀತಿಯ ಸಹಕಾರ ನೀಡಿದ ಸಮಾಜ ಬಾಂಧವರಿಗೆ, ಭಕ್ತರೆಲ್ಲರಿಗೂ ಉಡುಪಿಯ ಸ್ಥಾನಿಕ ಬ್ರಾಹ್ಮಣ ಸಂಘದ ಅಧ್ಯಕ್ಷರು, ಕಾರ್ಯದರ್ಶಿ ಹಾಗೂ ಪದಾಧಿಕಾರಿಗಳಿಂದ ಅನಂತ ಕೃತಜ್ಞತೆ ಸಲ್ಲಿಸುತ್ತೇವೆ.

## ಸುರತ್ಕಲ್ : "ಸೌರ ಋಗುಪಾಕರ್ಮ ಆಚರಣೆ"



ತಾ. 08.09.2022ನೇ ಗುರುವಾರ ನಮ್ಮ ಸಂಘದ ವತಿಯಿಂದ ಉಪವೀತರಾದ ವಟುಗಳಿಗೆ ಹಾಗೂ ಬ್ರಾಹ್ಮಣರಿಗೆ ಸೌರ ಋಗುಪಾಕರ್ಮವನ್ನು ಆಯೋಜಿಸಲಾಗಿತ್ತು. ಈ ಧಾರ್ಮಿಕ ಕಾರ್ಯಕ್ರಮವು ಶ್ರೀ ಕೃಷ್ಣರಾಜ್ ಭಟ್, ಹೆಜಮಾಡಿ ಇವರ ನೇತೃತ್ವದಲ್ಲಿ ಸಂಪನ್ನಗೊಂಡಿತು. ಈ ಕಾರ್ಯಕ್ರಮವನ್ನು ನಮ್ಮ ಸಂಘದ ಉಪಾಧ್ಯಕ್ಷರಾದ ಶ್ರೀ ಗೋಪಾಲಕೃಷ್ಣ ಇವರ "ಮಾನಸ" ಕಟ್ಟಡದಲ್ಲಿನ ಶ್ರೀ ವಿವೇಕಾನಂದ ಸಭಾಗೃಹದಲ್ಲಿ ನಡೆಸಲಾಯಿತು. ಇದರಲ್ಲಿ ಸುಮಾರು 35 ಜನ ದೊಡ್ಡವರು ಹಾಗೂ ಹೊಸದಾಗಿ ಉಪನಯನವಾದ 3 ನವವಟುಗಳು ಭಾಗವಹಿಸಿದ್ದರು. ಬೆಳಿಗ್ಗೆ 6.30ಕ್ಕೆ ಆರಂಭವಾದ ಈ ವೈದಿಕ ಪ್ರಕ್ರಿಯೆಯು 8.30ಕ್ಕೆ ಮುಕ್ತಾಯಗೊಂಡಿತು. ಉಪಾಕರ್ಮವು ಮುಗಿದ ಬಳಿಕ ಬಂದಿರುವ ಎಲ್ಲರಿಗೂ ಉಪಹಾರದ ವ್ಯವಸ್ಥೆಯನ್ನು ಮಾಡಲಾಗಿತ್ತು. ಸಂಘದ ಅಧ್ಯಕ್ಷರಾದ ಶ್ರೀ ಕೆ. ಮಾಧವರಾವ್ ವೈದಿಕರೊಂದಿಗೆ ಸಂಘದ ಪರವಾಗಿ ಕುಳಿತು ಉಪಾಕರ್ಮವನ್ನು ನಡೆಸಿಕೊಟ್ಟರು. ಈ ಕಾರ್ಯಕ್ರಮದಲ್ಲಿ ಸಂಘದ ಉಪಾಧ್ಯಕ್ಷರಾದ ಶ್ರೀ ವಾಸುದೇವ ಶ್ಯಾನುಭೋಗ್, ಶ್ರೀ ಗೋಪಾಲಕೃಷ್ಣ, ಕಾರ್ಯದರ್ಶಿಯವರಾದ ಶ್ರೀ ಪಾಲಚಂದ್ರ ಶರ್ಮ, ಜೊತೆ ಕಾರ್ಯದರ್ಶಿಯವರಾದ ಶ್ರೀ ಪ್ರವೀಣ್ ಕುಮಾರ್, ಕೋಶಾಧಿಕಾರಿಗಳಾದ ಶ್ರೀ ರಾಘವೇಂದ್ರ ರಾವ್, ಯುವ ವೇದಿಕೆಯ ಪದಾಧಿಕಾರಿಗಳು ಹಾಗೂ ಇತರ ಸದಸ್ಯರು ಪಾಲ್ಗೊಂಡಿದ್ದರು. ಕೊನೆಗೆ ಸಂಘದ ಕಾರ್ಯದರ್ಶಿ ಯವರಾದ ಶ್ರೀ ಪಾಲಚಂದ್ರ ಶರ್ಮರವರು ಎಲ್ಲರಿಗೂ ಧನ್ಯವಾದವನ್ನು ಅರ್ಪಿಸಿದರು.

**ದೇವಿಕೃಪಾ ಏಜೆನ್ಸೀಸ್, ನಂದಿಕೂರು**




ಫೋನ್ : 2556536 (R), 2555466 (O), Mobile : 9845149521


**ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.**

**ಪ್ರೊ : ಎಸ್. ಜನಾರ್ದನ್ ರಾವ್**

ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು

# ಶ್ರೀ ಶೃಂಗೇರಿ ಶಂಕರ ಮಠ, ಉಡುಪಿ ಶಾಖಾ





। ಶ್ರುತಿಸ್ಮೃತಿಪುರಾಣಾನಾಮ್ ಆಲಯಂ ಕರುಣಾಲಯಮ್ ।

ಶೃಂಗೇರಿ ಶ್ರೀ ಶಾರದಾಪೀಠದ ಜಗದ್ಗುರುಗಳು ನಮ್ಮ ಸ್ಥಾನಿಕ ಬ್ರಾಹ್ಮಣ ಸಮಾಜದ ಬಗ್ಗೆ ಬಹಳ ವಾತ್ಸಲ್ಯ ಹೊಂದಿದವರು. ಹಾಗಾಗಿ ನಮ್ಮ ಬ್ರಾಹ್ಮಣ್ಯದ ಬಗ್ಗೆ ಹೆಚ್ಚಿನ ಇತರ ಬ್ರಾಹ್ಮಣರು ಸಂಶಯ ವ್ಯಕ್ತಪಡಿಸಿದಾಗ ನಮ್ಮ ಪ್ರಾರ್ಥನೆಯನ್ನು ಮನ್ನಿಸಿ ವಿಚಾರವಿಮರ್ಶೆ ನಡೆಸಿ ನಮ್ಮ ಯಥಾರ್ಥ ಸ್ಥಾನಮಾನಗಳನ್ನು ಗುರುತಿಸಿದವರು. ಅಷ್ಟೇ ಅಲ್ಲ 'ಶ್ರೀಮುಖ' ವನ್ನು ನೀಡಿ ನಮ್ಮನ್ನು ವ್ಯತ್ಯಾಸವಾಗಿ ಕಾಣುವಂತಿಲ್ಲ ಎಂದು ಲೋಕಕ್ಕೇ ತಿಳಿಸಿದವರು. ಶ್ರೀ ಶ್ರೀಗಳವರು ನಮ್ಮ ಬೆಂಬಲಕ್ಕೆ ನಿಂತು ನಾವೂ ತಲೆ ಎತ್ತಿ ನಿಲ್ಲುವ ಅವಕಾಶ ಕಲ್ಪಿಸಿಕೊಟ್ಟರು. ಅಷ್ಟಲ್ಲದೇ ನಮ್ಮ ಸಮಾಜದ ಹಿರಿಯ ವಿದ್ವಾಂಸರಾದ ಶ್ರೀ ಆತ್ಮಾರಾಮ ಶಾಸ್ತ್ರಿಗಳನ್ನು ಹೆಬ್ಬೂರು ಕೋದಂಡಾಶ್ರಮ ಮಠದ ಮಠಾಧಿಪತಿಗಳನ್ನಾಗಿ ನಿಯೋಜಿಸಿದರು. ಇನ್ನೂ ಇಬ್ಬರನ್ನು ಧರ್ಮಾಧಿಕಾರಿಗಳನ್ನಾಗಿ ನೇಮಿಸಿದರು. ಅನೇಕರಿಗೆ ಮಠಮುದ್ರಾಧಿಕಾರ ಸ್ಥಾನವನ್ನು ದಯಪಾಲಿಸಿದರು. ನಮ್ಮವರ ಹೆಚ್ಚಿನ ದೇವಾಲಯಗಳಿಗೆ ಭೇಟಿಯಿತ್ತು ಕುಂಭಾಭಿಷೇಕಾದಿ ಕಾರ್ಯಕ್ರಮಗಳನ್ನು ಸಂಪನ್ನಗೊಳಿಸಿದರು. ಇಂತಹ ಸಾಕ್ಷಾತ್ ಪರಮೇಶ್ವರ ಸ್ವರೂಪರಾದ ಮತ್ತು ಶಿಷ್ಯಾನುಗ್ರಹ ತತ್ಪರರಾದ ಗುರುಗಳು ನಮಗೆ ದೊರೆತಿರುವುದು ನಮ್ಮ ಮಹಾಭಾಗ್ಯ. ಆ ಪರಮಪೂಜ್ಯರಿಗೆ ಎಷ್ಟು ಕೃತಜ್ಞತೆ ಸಲ್ಲಿಸಿದರೂ ಕಡಿಮೆಯೇ.

ಉಡುಪಿಯಲ್ಲಿ ಶ್ರೀ ಮಠದ ಶಾಖೆಯನ್ನು ಸ್ಥಾಪಿಸಬೇಕೆಂಬುದು ಪರಿಸರದ ಸಮಾಜ ಬಂಧುಗಳ ಅನೇಕ ವರ್ಷಗಳ ಬೇಡಿಕೆಯಾಗಿತ್ತು. ಈಗ ಆ ಪ್ರಾರ್ಥನೆಗೆ ಶ್ರೀ ಶ್ರೀ ಜಗದ್ಗುರು ಭಾರತೀತೀರ್ಥ ಮಹಾಸನ್ನಿಧಾನಂಗಳವರು ಹಾಗೂ ತತ್ಕರಕಮಲ ಸಂಜಾತರಾದ ಶ್ರೀ ಶ್ರೀ ಜಗದ್ಗುರು ವಿಧುಶೇಖರಭಾರತೀ ಸನ್ನಿಧಾನಂಗಳವರು ಪರಮಾನುಗ್ರಹಪುರಸ್ಸರವಾಗಿ ಸಮ್ಮತಿ ಸೂಚಿಸಿ ಆಶೀರ್ವದಿಸಿದ್ದಾರೆ ಹಾಗೂ ಸೂಕ್ತ ಸ್ಥಳವನ್ನು ಗುರುತಿಸಲು ಹೇಳಿದ್ದಾರೆ. ಸುಮಾರು ನಾಲ್ಕು ಎಕರೆ ವಿಸ್ತೀರ್ಣದ ಸಮತಲದ ಭೂಮಿಯನ್ನು ಹುಡುಕಿ ಅದನ್ನು ಶ್ರೀ ಗುರುಗಳಲ್ಲಿ ನಿವೇದಿಸಿಕೊಂಡಾಗ ಒಪ್ಪಿಕೊಂಡು ವ್ಯವಹಾರಿಕ ವ್ಯವಸ್ಥೆಗಳನ್ನು ಶ್ರೀಮಠದ ಮಾನ್ಯ ಆಡಳಿತಾಧಿಕಾರಿಗಳಾದ ಪದ್ಮಶ್ರೀ ಡಾ. ವಿ.ಎಸ್. ಗೌರಿಶಂಕರ್ ಇವರಲ್ಲಿ ಮಾತನಾಡುವಂತೆ ಆದೇಶಿಸಿದರು. ಆಡಳಿತಾಧಿಕಾರಿಗಳಲ್ಲಿ ನಿವೇದಿಸಿಕೊಂಡಾಗ ಎರಡು ಎಕರೆಯನ್ನು ಖರೀದಿಸಲು ಸಿದ್ಧ ಎಂದಿದ್ದಾರೆ. ಉಳಿದ ಭೂಮಿಯನ್ನು ನಮ್ಮ ಸಮಾಜದವರೇ ಖರೀದಿ ಮಾಡಿ ಶ್ರೀ ಗುರುಗಳಿಗೆ ಅರ್ಪಿಸುವುದೆಂದು ಯೋಚಿಸಿದ್ದೇವೆ. ಒಂದು ಸೆಂಟ್ಸ್ ಭೂಮಿಗೆ ಸುಮಾರು ರೂಪಾಯಿ ಒಂದು ಲಕ್ಷದಂತೆ ಸಂಗ್ರಹಿಸುವ ಯೋಜನೆ ಮಾಡಿದ್ದೇವೆ. ಆದ್ದರಿಂದ ಶ್ರೀಗುರುಪೀಠಕ್ಕೆ ನಮ್ಮ ಆತ್ಯಂತಿಕವಾದ ಕೃತಜ್ಞತೆಯ ಸಮರ್ಪಣೆಗಾಗಿ ನಡೆಸುವ ಈ ಪ್ರಯತ್ನದಲ್ಲಿ ಎಲ್ಲಾ ಸಮಾಜಬಂಧುಗಳ ಹೃತ್ಪೂರ್ವಕ ಸಹಕಾರ ಅತ್ಯವಶ್ಯಕವಾದುದು. ತಮ್ಮೆಲ್ಲರ ಬೆಂಬಲದ ನಿರೀಕ್ಷೆ ನಮ್ಮದು.

ಧನಸಹಾಯ ನೀಡುವವರು 'Dharmadhikari, Sri Sringeri Matha, Udupi Branch' ಈ ಹೆಸರಿನಲ್ಲಿ SB A/c. No. 0182500101876001, IFSC Code : KARB 0000018 ಕರ್ನಾಟಕ ಬ್ಯಾಂಕ್, ಅಂಬಾಗಿಲು ಇಲ್ಲಿಗೆ ಸಲ್ಲುವಂತೆ ಚೆಕ್/ಡಿಡಿ ಇತ್ಯಾದಿಗಳನ್ನು ಕಳುಹಿಸಬೇಕಾಗಿ ಪ್ರಾರ್ಥನೆ.

80ಜಿ ನಿಯಮದಂತೆ ತೆರಿಗೆ ವಿನಾಯಿತಿ ಬೇಕಿದ್ದವರು 'Sri Sringeri Sharada Peetham Charitable Trust, Sringeri' ಈ ಹೆಸರಿನಲ್ಲಿ ಚೆಕ್/ಡಿಡಿ ಇತ್ಯಾದಿಗಳನ್ನು ನೀಡಬೇಕಾಗಿ ವಿನಂತಿಸುತ್ತೇವೆ.

**ಪದ್ಮಶ್ರೀ ಡಾ.ವಿ.ಎಸ್. ಗೌರಿಶಂಕರ್**
ಮಾನ್ಯ ಆಡಳಿತಾಧಿಕಾರಿಗಳು, ಶ್ರೀ ಶಾರದಾ ಪೀಠ, ಶೃಂಗೇರಿ

: ಸಂಪರ್ಕಿಸಬೇಕಾದವರ ವಿಳಾಸ :

**ವೇದಮೂರ್ತಿ ವಾಗೀಶ ಎಸ್. ಶಾಸ್ತ್ರೀ**
ಸಮಿತಿ ಸಂಚಾಲಕರು, ಉಡುಪಿ ಪ್ರಾಂತೀಯ ಧರ್ಮಾಧಿಕಾರಿ, ಶೃಂಗೇರಿ ಮಠ
ಮೊಬೈಲ್ : 9449591513

**ಶ್ರೀ ಎ. ಶಿವ ರಾವ್**
ಚಾರ್ಟರ್ಡ್ ಅಕೌಂಟೆಂಟ್, ಬೆಂಗಳೂರು. ಮೊಬೈಲ್ : 9880570747

**ಶ್ರೀ ಬಿ.ಕೆ. ಧನಂಜಯ ರಾವ್**
ನ್ಯಾಯವಾದಿಗಳು, ಲೈಲ, ಬೆಳ್ತಂಗಡಿ. ಮೊಬೈಲ್ : 9480055581

**ಶ್ರೀ ಕೆ. ಮಂಜುನಾಥ ಹೆಬ್ಬಾರ್**
ಅಧ್ಯಕ್ಷರು, ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ, ಶ್ರೀ ಶಾರದಾ ಮಂಟಪ, ಕುಂಜಿಬೆಟ್ಟು, ಉಡುಪಿ
ಮೊಬೈಲ್ : 9611099894

**ಶ್ರೀ ಕರುಣ್ ರಾವ್, ಬೆಳ್ಳೆ**
ಕಾರ್ಯದರ್ಶಿ, ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರು
ಮೊಬೈಲ್ : 7337634359, 9243309120

# ಪಾದೆಬೆಟ್ಟು ಶ್ರೀ ವಿಷ್ಣುಮೂರ್ತಿ ದೇವಸ್ಥಾನಕ್ಕೆ ಕೊಡುಗೆಗಳು

## ಎರಡು ಕಾಲುದೀಪಗಳ ಸಮರ್ಪಣೆ

ದಿ.16–09–2022ಶುಕ್ರವಾರ ಪಾದೆಬೆಟ್ಟು ಶ್ರೀ ವಿಷ್ಣುಮೂರ್ತಿ ದೇವಸ್ಥಾನದಲ್ಲಿ ಉಡುಪಿಯ ಖ್ಯಾತ ಉದ್ಯಮಿಯೊಬ್ಬರಿಂದ ಸುಮಾರು ಒಂದು ಲಕ್ಷಕ್ಕೂ ಮಿಕ್ಕಿದ ಮೌಲ್ಯದ ಎರಡು ಕಾಲುದೀಪಗಳ ಸಮರ್ಪಣೆ ನಡೆಯಿತು. ಶ್ರೀ ವಿಷ್ಣುಮೂರ್ತಿ ದೇವರು ಅವರಿಗೆ ಹಾಗೂ ಕುಟುಂಬದವರಿಗೆ ಆಯುರಾರೋಗ್ಯ, ಐಶ್ವರ್ಯಗಳನ್ನು ಕೊಟ್ಟು ಕಾಪಾಡಲಿ.

## ತುಲಾಭಾರದ ತಕ್ಕಡಿ ಸಮರ್ಪಣೆ

ಪಾದೆಬೆಟ್ಟಿನಲ್ಲಿ ವಾಸ್ತವ್ಯವಿರುವ ಶ್ರೀಯುತ ಉಚ್ಚಿಲ ಸುಬ್ಬರಾವ್ ಶ್ಯಾನುಭಾಗ್ ಮತ್ತು ಶ್ರೀಮತಿ ಸುಮಿತ್ರಾ ದಂಪತಿಗಳ ಪುತ್ರಿ ಶ್ರೀಮತಿ ಜಯಶ್ರೀ ಕೃಷ್ಣ ಪ್ರಸಾದ್ ರಾವ್, ಶೃಂಗೇರಿ ಇವರು ತುಲಾಭಾರದ ತಕ್ಕಡಿಯನ್ನು ಪಾದೆಬೆಟ್ಟು ಶ್ರೀ ವಿಷ್ಣುಮೂರ್ತಿ ದೇವರ ಸನ್ನಿಧಾನಕ್ಕೆ ಸಮರ್ಪಿಸಿದರು.

## ಬೆಳ್ಳಿಯ ಕಾಲುದೀಪ ಸಮರ್ಪಣೆ

ಪಾದೆಬೆಟ್ಟು ಶ್ರೀ ವಿಷ್ಣುಮೂರ್ತಿ ದೇವಸ್ಥಾನದಲ್ಲಿ ಸೋಣಾರತಿ ನಡೆದ ಸುಸಂಧರ್ಭದಲ್ಲಿ ಪಾದೆಬೆಟ್ಟು ಶ್ರೀಮತಿ ಸುಶೀಲಾ ಗಣೇಶ್ ಶಾನುಭಾಗ್ ಮತ್ತು ಮಕ್ಕಳು ಸುಮಾರು ರೂ.90,000 ಬೆಲೆಯ ಬೆಳ್ಳಿಯ ಕಾಲುದೀಪವನ್ನು ದಿ. ಗಣೇಶ್ ಶಾನುಭಾಗ್ ರವರ ನೆನಪಿನಲ್ಲಿ ಶ್ರೀದೇವರಿಗೆ ಒಪ್ಪಿಸಿದರು.

## ತಾಮ್ರದ ತೀರ್ಥದ ಕೌಳಿಗೆ ಸಮರ್ಪಣೆ

ದಿ.31.08.2022 ಪಾದೆಬೆಟ್ಟು ರಾಯರಕೆರೆಯಲ್ಲಿ ವಾಸ್ತವ್ಯವಿರುವ ಶ್ರೀ ಸುಬ್ರಮಣ್ಯ ರಾವ್ ಮತ್ತು ರೇವತಿ ದಂಪತಿಗಳು ಪಾದೆಬೆಟ್ಟು ಶ್ರೀ ವಿಷ್ಣುಮೂರ್ತಿ ದೇವಳಕ್ಕೆ ಸುಮಾರು ರೂ.3,500 ಬೆಲೆಯ ತಾಮ್ರದ ತೀರ್ಥದ ಕೌಳಿಗೆಯನ್ನು ಸೇವಾರೂಪದಲ್ಲಿ ಸಮರ್ಪಿಸಿದರು.

## ಕುರ್ಚಿ ಕೊಡುಗೆ

ದಿ.17.09.2022 ಪಾದೆಬೆಟ್ಟು ಶ್ರೀ ವಿಷ್ಣುಮೂರ್ತಿ ದೇವಸ್ಥಾನದಲ್ಲಿ ತುಳಸೀ ಅರ್ಚನೆಯ ಸಂದರ್ಭದಲ್ಲಿ ಭಕ್ತರ ಅನುಕೂಲಕ್ಕಾಗಿ ಪಡುಬಿದ್ರಿಯ ಶ್ರೀಮತಿ ಪವಿತ್ರ ಕೃಷ್ಣ ರಾವ್ 33 ಕುರ್ಚಿಗಳನ್ನು ನೀಡಿದ್ದಾರೆ. ಇವರ ಕುಟುಂಬಿಕರಿಗೆ ಶ್ರೀ ವಿಷ್ಣುಮೂರ್ತಿಯು ಸೌಭಾಗ್ಯ ನೀಡಲಿ.

# ಸ್ಥಾನಿಕ ಬ್ರಾಹ್ಮಣ ಸಭಾ (ರಿ.)ಪಡುಬಿದ್ರೆ, ಮಹಿಳಾ ವೇದಿಕೆ : ಸೋಣ ಸಂಭ್ರಮ





ಸ್ಥಾನಿಕ ಬ್ರಾಹ್ಮಣ ಸಭಾ (ರಿ.) ಪಡುಬಿದ್ರೆ ಇದರ ಮಹಿಳಾ ವೇದಿಕೆಯ ಸೋಣ ಸಂಭ್ರಮ ಕಾರ್ಯಕ್ರಮದಲ್ಲಿ ಅತಿಥಿಯಾಗಿದ್ದ ಮಂಗಳೂರು ನಗರದ ಉಪಮೇಯರ್ ಶ್ರೀಮತಿ ಸುಮಂಗಲಾ ಸುಧೀರ್ ರಾವ್ ಮಾತನಾಡಿ "ಆಟಿ ಆಚರಣೆ ಎಲ್ಲಾ ಕಡೆಗಳಲ್ಲಿ ಆಚರಿಸಲಾಗುತ್ತಿದೆ. ಆದರೆ ಮಹಿಳೆಯರಿಗೆ ವಿಶೇಷ ಸೋಣ ತಿಂಗಳು. ಇದರ ವಿಶೇಷತೆಯನ್ನು ಸಾರುವ ನಿಟ್ಟಿನಲ್ಲಿ ಸೋಣ ಸಂಭ್ರಮವನ್ನು ಇಲ್ಲಿ ಆಚರಿಸುತ್ತಿರುವುದು ನಮಗೆಲ್ಲ ಮಾದರಿಯಾಗಿದೆ" ಎಂದರು. ಸಮಾರಂಭದ ಅಧ್ಯಕ್ಷತೆಯನ್ನು ವೇದಾವತಿ ಲಕ್ಷ್ಮೀಕಾಂತ ರಾವ್ ವಹಿಸಿದ್ದರು. ವೇದಿಕೆಯಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ಎಂ.ಕೆ.ಮೋಹನ್ ರಾವ್, ಗೌರವಾಧ್ಯಕ್ಷರಾದ ಶ್ರೀ. ಪಿ.ಬಿ ವಾಸುದೇವ ರಾವ್, ಪ್ರಧಾನ ಕಾರ್ಯದರ್ಶಿ ಶ್ರೀಮತಿ ರಮ್ಯಾ ಅರುಣ್ ರಾವ್ ಮುಂಡ್ಕೂರು, ಯುವ ವೇದಿಕೆಯ ಕ್ರೀಡಾ ಕಾರ್ಯದರ್ಶಿ ಶ್ರೀ ಕೃಷ್ಣರಾಜ್ ರಾವ್ ಮುದರಂಗಡಿ ಹಾಗೂ ಮಹಿಳಾ ವೇದಿಕೆಯ ಸಂಚಾಲಕಿ ಶ್ರೀಮತಿ ಸಾವಿತ್ರಿ ಅರವಿಂದ ರಾವ್ ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ಸಮಾಜದ ನಿವೃತ್ತ ಶಿಕ್ಷಕರಾದ ಶ್ರೀಮತಿ ಧರ್ಮಪ್ರಭಾ ಬಳ್ಕುಂಜೆ, ಶ್ರೀಮತಿ ಶರಾವತಿ ಯು. ರಾವ್ ಎಲ್ಲೂರು, ಶ್ರೀಮತಿ ಲಲಿತಾಂಬ ಯೋಗಾನಂದ ಶಾಸ್ತ್ರಿ ಪಡುಬಿದ್ರಿ, ಶ್ರೀಮತಿ ಶಾಂತಬಾಯಿ ಉಚ್ಚಿಲ ಅವರನ್ನು ಗೌರವಿಸಲಾಯಿತು. ಬಳಿಕ ಎಸ್ಎಸ್ಎಲ್ಸಿ ಮತ್ತು ಪಿಯುಸಿಯಲ್ಲಿ ಶೇಕಡ 90 ಕ್ಕಿಂತ ಹೆಚ್ಚು ಅಂಕ ಪಡೆದ ಕುಮಾರಿ ಶರಣ್ಯ ಹಾಗೂ ಕುಮಾರಿ ಅಮೂಲ್ಯ ಇವರಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು. ವಿಶೇಷವಾಗಿ ಎಸ್.ಎಸ್.ಎಲ್.ಸಿ.ಯಲ್ಲಿ 625 ರಲ್ಲಿ 625 ಅಂಕ ಪಡೆದು ರಾಜ್ಯದಲ್ಲಿ ಪ್ರಥಮ ಸ್ಥಾನ ಪಡೆದ ಕುಮಾರಿ ಧನ್ಯಶ್ರೀ ಪಾದೆಬೆಟ್ಟು ಇವರನ್ನು ಸನ್ಮಾನಿಸಲಾಯಿತು.

ಶ್ರೀಮತಿ ವೇದಾವತಿ ದಿವಾಕರ್ ರಾವ್, ಶ್ರೀಮತಿ ಸೌಮ್ಯಶ್ರೀ, ಶ್ರೀಮತಿ ರಮ್ಯ ಅರುಣ್ ರಾವ್, ಶ್ರೀಮತಿ ದೀಪ ಸುಧಾಕರ್, ಕುಮಾರಿ ಪದ್ಮಶ್ರೀ ಸನ್ಮಾನಿತರನ್ನು ಪರಿಚಯಿಸಿ, ಸನ್ಮಾನ ಪತ್ರ ವಾಚಿಸಿ ನಿರೂಪಿಸಿದರು. ಕಾರ್ಯಕ್ರಮದಲ್ಲಿ ಮೂಡಬಿದರೆ, ಕಾರ್ಕಳ, ಸುರತ್ಕಲ್ ಸಂಘದವರು ತಮ್ಮ ಅನಿಸಿಕೆಯಲ್ಲಿ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು. ಶ್ರೀಮತಿ ಮಂಜುಶ್ರೀ ಸ್ವಾಗತಿಸಿ, ಶ್ರೀಮತಿ ವೇದಾವತಿ ಲಕ್ಷ್ಮೀಕಾಂತ ರಾವ್ ಪ್ರಾಸ್ತಾವಿಕವಾಗಿ ಮಾತನಾಡಿ, ಶ್ರೀಮತಿ ಸುಮಂಗಲಾ ನಯನಾಭಿರಾಮಸ್ವಾಮಿ ವಂದಿಸಿ, ಶ್ರೀಮತಿ ಪವಿತ್ರ ಕೃಷ್ಣರಾವ್ ಕಾರ್ಯಕ್ರಮ ನಿರೂಪಿಸಿದರು. ಬಳಿಕ ನಡೆದ ಭೋಜನ ಕೂಟದಲ್ಲಿ ಮಹಿಳೆಯರು ಮನೆಯಲ್ಲೇ ತಯಾರಿಸಿದ 24 ಖಾದ್ಯಗಳು ಎಲ್ಲರ ಗಮನ ಸೆಳೆದು ಮೆಚ್ಚುಗೆಗೆ ಪಾತ್ರವಾಯಿತು.

ಶುಭಾಶಯಗಳೊಂದಿಗೆ

**ಹೆಬ್ಬಾರ್ ಎಂಟರ್‌ಪ್ರೈಸಸ್**

ವೈಷ್ಣವಿ ಬಿಲ್ಡಿಂಗ್, ವಾದಿರಾಜ ರಸ್ತೆ, ಉಡುಪಿ-576101.

ನಮ್ಮಲ್ಲಿ ಶುಭ ಸಮಾರಂಭಗಳಿಗೆ ಬೇಕಾಗುವ ಶಾಮಿಯಾನ, ಕುರ್ಚಿ, ಟೇಬಲ್, ಪಾತ್ರೆ, ಅಡುಗೆ ಹಾಗೂ ಕ್ಯಾಟರಿಂಗ್ ವ್ಯವಸ್ಥೆ ಲಭ್ಯವಿದೆ.

ಪ್ರೊ : ಮಂಜುನಾಥ ಹೆಬ್ಬಾರ್ ಸಂಪರ್ಕ ಸಂಖ್ಯೆ 9611099894

## ಸುಂದರಕಾಂಡ ಪ್ರವಚನ ಉದ್ಘಾಟನೆ

ತಾ. 11.09.2022ರ ಭಾನುವಾರ ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ, ಉಡುಪಿ ಮತ್ತು ಚಿನ್ಮಯಿ ಮಿಷನ್ ಮಂಗಳೂರು ಇವರ ವತಿಯಿಂದ ಒಂದು ವಾರದ ಕಾಲ ನಡೆದೆ ಸುಂದರಕಾಂಡ ಪ್ರವಚನವನ್ನು ಶ್ರೀ ಅಪರಾಜಿತಾನಂದ ಸ್ವಾಮೀಜಿಯವರು ಉದ್ಘಾಟಿಸಿದರು. ನಮ್ಮ ಸಂಘದ ಪರವಾಗಿ ಮಾಜಿ ಅಧ್ಯಕ್ಷರಾದ ಶ್ರೀ ಸಿ.ಎಸ್.ರಾವ್ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ತಾ.17.09.2022ರ ವರೆಗೆ ನಿರಂತರವಾಗಿ ಸಾಯಂಕಾಲ 6ರಿಂದ 7.30ರ ವರೆಗೆ ಶ್ರೀ ಶಾರದಾ ಮಂಟಪದಲ್ಲಿ ಪ್ರವಚನಾ ಕಾರ್ಯಕ್ರಮವು ಸಾಂಗವಾಗಿ ನೆರವೇರಿತು.

## ವಿದ್ಯಾರ್ಥಿ ವೇತನ ವಿತರಣಾ ಸಮಾರಂಭ




ಜ್ಞಾನಶಕ್ತಿ ಟ್ರಸ್ಟ್ ರಿಜಿಸ್ಟರ್ಡ್, ಕೋಡಿಗೆಹಳ್ಳಿ, ಬೆಂಗಳೂರು ಇದರ ವಿದ್ಯಾ ಸಮಿತಿಯ ಮುಖೇನ ಕೋಡಿಗೆಹಳ್ಳಿ ಸುತ್ತಮುತ್ತಲಿನ ಪರಿಸರದ ಮತ್ತು ಕನ್ನಹಳ್ಳಿಯ ಸರಕಾರಿ ಪ್ರಾಥಮಿಕ ಶಾಲೆಯ ಹೆಚ್ಚು ಅಂಕ ಪಡೆದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಉಚಿತ ವಿದ್ಯಾರ್ಥಿ ವೇತನ ವಿತರಣಾ ಸಮಾರಂಭ ತಾ.18.09.2022 ರಂದು ಜ್ಞಾನಶಕ್ತಿ ಸಭಾಭವನ ಕೋಡಿಗೆ ಹಳ್ಳಿಯಲ್ಲಿ ನಡೆಯಿತು.

ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯ ದೇವರ ಮುಂದೆ ಸಂಕಲ್ಪ ಮತ್ತು ವಿದ್ಯಾರ್ಥಿಗಳ ಶ್ರೇಯಸ್ಸು ಮತ್ತು ಅಭಿವೃದ್ಧಿಗಾಗಿ ಪ್ರಾರ್ಥಿಸಲಾಯಿತು. ಶ್ರೀ ರಾಜೇಶ ಅಜ್ಜಾವರ ರವರು ಉಪಸ್ಥಿತರಿದ್ದ ಎಲ್ಲರನ್ನು ಸ್ವಾಗತಿಸಿದರು. ಕೂಡಿಗೆಹಳ್ಳಿಯ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಗಣ್ಯರು ಹಾಗೂ ಸಮಾಜದ ಹಿರಿಯರನ್ನು ಸನ್ಮಾನಿಸಲಾಯಿತು. ಪ್ರತಿಭಾವಂತ ವಿದ್ಯಾರ್ಥಿಗಳು ತಮ್ಮ ಅನಿಸಿಕೆಗಳನ್ನು ಹಂಚಿಕೊಂಡರು. ಮುಖ್ಯ ಅತಿಥಿಗಳಾದ ಕರ್ನಾಟಕ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಪ್ರದೀಪ್ ಕುಮಾರ್ ಪಂಜ ಅವರು ವಿದ್ಯಾರ್ಥಿಗಳಿಗೆ ಶುಭಾಶಯಗಳನ್ನು ಹೇಳಿದರು. ಅಧ್ಯಕ್ಷರಾದ ರವೀಂದ್ರನಾಥ್ ಬೆಳ್ಳೆಯವರು ವಿದ್ಯಾರ್ಥಿಗಳಿಗೆ ಹಿತನುಡಿಗಳನ್ನು ಹೇಳಿದರು. ಪ್ರತಿಭಾ ಪುರಸ್ಕಾರದ ಪ್ರಾಯೋಜಕರಾದ ಅಧ್ಯಕ್ಷರಾದ ರವೀಂದ್ರನಾಥ ಬೆಳ್ಳೆ ಮತ್ತು ಕರ್ನಾಟಕ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಪ್ರದೀಪ್ ಕುಮಾರ್ ಪಂಜ ಅವರಿಗೆ ಹಾಗೂ ಎಲ್ಲರಿಗೂ ಕಾರ್ಯದರ್ಶಿಗಳಾದ ಬಿ. ಕೃಷ್ಣಾನಂದರವರು ಧನ್ಯವಾದವನ್ನು ಸಮರ್ಪಿಸಿದರು. ವಿದ್ಯಾಸಮಿತಿಯ ಅಧ್ಯಕ್ಷರಾದ ಮುರಳೀಧರ ಜೋಶಿಯವರ ಮುಂದಾಳತ್ವದಲ್ಲಿ ಶಶಿಕಾಂತ ರಾವ್‌ರವರು ಕಾರ್ಯಕ್ರಮವನ್ನು ನಿರೂಪಿಸಿದರು. ಶಾಂತಿಮಂತ್ರ ಪಠಣದೊಂದಿಗೆ ಕಾರ್ಯಕ್ರಮ ಸಂಪನ್ನಗೊಂಡಿತು.

## ದೀಪಾವಳಿ ಸ್ನಾನಂ

– ಭವಾನಿಶಂಕರ ಉಪಾಧ್ಯಾಯ, ಉಡುಪಿ

*ಅಶ್ವಯುಜ ಕೃಷ್ಣ ಪಕ್ಷೇ ಚತುರ್ದಶ್ಯಾಂ ಇನೋದಯೇ ।*
*ತೈಲಾಭ್ಯಂಗಂ ಚ ಕರ್ತವ್ಯಂ ಸ್ನಾನಂ ಉಷ್ಣೇನ ವಾರಿಣಾ ॥*

ಅಶ್ವಯುಜ ಕೃಷ್ಣ ಪಕ್ಷದ ಚತುರ್ದಶೀ ಸೂರ್ಯೋದಯದ ಮುಂಚೆಯೇ ತೈಲಾಭ್ಯಂಗ ಮಾಡಿಕೊಂಡು ಬಿಸಿ ನೀರಿನಲ್ಲಿ ಸ್ನಾನವನ್ನು ಆಚರಿಸಬೇಕು. ಹಾಗೆಯೇ ಯಾವ ವಸ್ತುಗಳಲ್ಲಿ ಯಾವ ದೇವತೆಯವರ ಸಾನ್ನಿಧ್ಯ ಇರುವುದು.

*ತೈಲೇ ಲಕ್ಷ್ಮೀ ಜಲೇ ಗಂಗಾ ದೀಪಾವಳಿ ದಿನೇ ವಸೇತ್*
*ಅಲಕ್ಷ್ಮೀ ಪರಿಹಾರಾರ್ಥಂ ಅಭ್ಯಂಗ ಸ್ನಾನ ಮಾಚರೇತ್ ॥*

ನಾವು ಹಚ್ಚಿಕೊಳ್ಳುವ ತೈಲದಲ್ಲಿ ಲಕ್ಷ್ಮೀ ದೇವಿಯ ಸಾನ್ನಿಧ್ಯವಿರುತ್ತದೆ. ಸ್ನಾನ ಮಾಡುವ ಬಿಸಿ ನೀರಲ್ಲಿ ಗಂಗಾ ದೇವಿಯ ಸಾನ್ನಿಧ್ಯ ಇರುತ್ತದೆ. ಈ ಅಭ್ಯಂಗವನ್ನು ಅಲಕ್ಷ್ಮೀ ಪರಿಹಾರಕ್ಕೋಸ್ಕರ ಆಚರಿಸಬೇಕು. ಹಾಗೆಯೇ

*॥ ಶಿರೋಭ್ಯಸ್ತೇನ ತೈಲೇನ ಸಾಂಗಂ ಕಿಂಚಿದುಪ ಸ್ಪೃಶೇತ್ ॥*

ನಾವು ಶಿರಸ್ಸಿಗೆ ಪೂಸಿಕೊಂಡ ಎಣ್ಣೆಯನ್ನು ಸ್ವಲ್ಪವೂ ಕೂಡ ಮೈಕೈಗಳಿಗೆ, ದೇಹಗಳಿಗೆ ಹಚ್ಚಬಾರದು. ಮನೆಯಲ್ಲಿ ದೇವರ ಎದುರು ಮುಖ ಮಾಡಿ ಕೂತುಕೊಂಡು ಮನೆಯ ಹಿರಿಯರು, ತಾಯಿ ಅಥವಾ ಜ್ಯೇಷ್ಠ ಭಗಿನಿಯವರು ತಲೆಗೆ ತೈಲ ಹಚ್ಚುವ ಸಂಪ್ರದಾಯ ಇದೆ. ಹಾಗಾಗಿ ನಾವು ಎಣ್ಣೆಯನ್ನು ಮೈಗೆ ಹಚ್ಚುವ ಮುನ್ನ ತಲೆಗೆ ಎಣ್ಣೆಯನ್ನು ಪೂಸಿದ ಬಳಿಕ ಕೈ ಕಾಲುಗಳಿಗೆ ತೈಲವನ್ನು ಬಳಸಬೇಕು. ತದುಪರಿ ಇನ್ನೊಂದು ಮುಖ್ಯ ಸಂಗತಿ ಏನೆಂದರೆ?

*॥ ಪ್ರಾತಃ ಅಭ್ಯಕ್ತ ದೇಹಸ್ಯ ನಿಷ್ಕೃತಿ ನೈವ ವಿದ್ಯತೇ ॥*

ಅಭ್ಯಂಗ ಸ್ನಾನವನ್ನು ಉಷಃ ಕಾಲದಲ್ಲಿ ಮಾಡಬೇಕು. ಸೂರ್ಯ ಉದಯದ ನಂತರ ಸ್ನಾನವನ್ನು ಮಾಡಬಾರದು. ಹಾಗೆ ಮಾಡಿದರೆ ದೊಡ್ಡ ಪಾಪವು ನಮ್ಮನ್ನು ಪೀಡಿಸುತ್ತದೆ. ಹಾಗೇನಾದರೂ ಸ್ನಾನವನ್ನು ಮಾಡಿದರೆ ಆ ಪಾಪಕ್ಕೆ ಪ್ರಾಯಶ್ಚಿತವಿಲ್ಲ ಎಂದು ತಿಳಿದವರು ಸೂಚನೆಯನ್ನು ನೀಡಿರುವರು. ಈ ದೀಪಾವಳಿಯ ಸ್ನಾನದ ಕ್ರಮವು ಎಲ್ಲರಿಗೂ ಅನ್ವಯವಾಗುವುದು. ಈ ಪದ್ಧತಿಯನ್ನು ಆಚರಿಸುವುದು. ಪ್ರಾಜ್ಞರಾದ ಮಹನೀಯರ ಪಾಲಿಗೆ ಸೇರಿದ್ದು. ಎಲ್ಲರಿಗೂ ಮಂಗಳವು ಉಂಟಾಗಲಿ.

## ನೂತನ ಪದಾಧಿಕಾರಿಗಳ ಪದಗ್ರಹಣ ಸಮಾರಂಭ

ತಾ. 11.09.2022ರಂದು ಆದಿ ಶಂಕರ ಸ್ಥಾನಿಕ ಬ್ರಾಹ್ಮಣ ಪರಿಷತ್ತು (ರಿ.), ಮೂಡಬಿದಿರೆ. ಇದರ ನೂತನ ಪದಾಧಿಕಾರಿಗಳ ಪದಗ್ರಹಣ ಸಮಾರಂಭ, ಮಹಿಳಾವೇದಿಕೆ, ಯುವ ವೇದಿಕೆಗಳು, ಶ್ರೀ ಆದಿಶಂಕರ ಯಕ್ಷಗಾನ ಮಂಡಳಿ ಉದ್ಘಾಟನೆ, ವಾರ್ಷಿಕೋತ್ಸವ ಸಮಾರಂಭದ ಲೆಕ್ಕ ಪತ್ರ, ನೂತನ ಬ್ಯಾಂಕ್ ತೆರೆಯುವ ಬಗ್ಗೆ ಸಮಾಲೋಚನೆ ಹೀಗೆ ಅನೇಕ ವಿಚಾರಗಳ ಸಭೆ ಗಣ್ಯರ ಸಮಕ್ಷ ಯಶಸ್ವಿಯಾಗಿ ಸಂಪನ್ನಗೊಂಡಿತು.

## ಸೌರ ಋಗುಪಾಕರ್ಮ ಆಚರಣೆ

ಅಖಿಲ ಸ್ಥಾನಿಕ ಬ್ರಾಹ್ಮಣ ಪುರೋಹಿತ ಅರ್ಚಕ ಪರಿಪಾಲನಾ ಸಭಾದ ಪರವಾಗಿ ಕಿರಿಮಂಜೇಶ್ವರದ ವೇದಮೂರ್ತಿ ಚಿದಾನಂದ ಶ್ಯಾನುಭೋಗ್‌ರವರು ತಮ್ಮ ಮನೆಯಲ್ಲಿ ಸೌರ ಋಗುಪಾಕರ್ಮವನ್ನು ತಾ.08.09.2022ರಂದು ಸಾಮೂಹಿಕವಾಗಿ ಆಯೋಜಿಸಿದ್ದರು. ಬೈಂದೂರು ವಲಯದ ನಮ್ಮ ಸಮಾಜದ ವಿಪ್ರರು ಉಪವೀತಧಾರಣೆ ಮಾಡಿದರು.

*With Best Complimemts From*

SRI M. SHAILESH RAO
Ph : 9448624324
B.E., Civil
Civil Engineer & Contractor
**SRI MALAVIKA ASSOCIATES**
KALSANKA-UDUPI ROAD, UDUPI.
Website : shreemaalavikaassociates.com

## ಅಕ್ಷರಗಳನ್ನು ಸರಿಯಾಗಿ ಜೋಡಿಸಿ ಸರಿಯಾದ ಗೀತೆ ರಚಿಸಿ



ತಯಾರಿಸಿದವರು :
**ಹರೀಶ್ ಹೆಬ್ಬಾರ್ ಹವರಾಲು**
9663028751

1) ಯ।ದಾ।ರ।ಶ।ಗಾ।ಕಾ।ಗೆ।ರೋ।ಆ।ಯಾ।ಮಾ।ನು।
2) ದು।ನಿ।ಲ್ಲೆ।ಗೊ।ಲ್ಲಿ।ದೆ।ಎ।ಬಾ।ಎ।
3) ತಿ।ಮು।ರೆ।ಥಿ।ನೆ।ತೆ।ಅ।ಓ।ದಿ।ಬಾ।ದೆ।
4) ತಾ।ನಿಂ।ಬಂ।ಕ್ಕಾ।ತು।ದು।ನೀ।ಗ।ನಿಂ।ನೀ।ನ।ಗ।
5) ದ।ನೀ।ಲು।ಯಾ।ವೆ।ನು।ಸುಂ।ಚೆ।ರ।ರೆ।
6) ರ।ತ।ಭೂ।ದಿ।ರಿ।ಶಿ।ಮಂ।ರ।ಸುಂ।ಭಾ।ದ।ರ।
7) ರ।ವಿ।ಷ।ವ।ನ್ನೆ।ಷ।ನ।ದ್ವೇ।ಡು।ಹಾ।ರು।ಹ।
8) ನು।ದೆ।ನ್ನ।ರೆ।ಬ।ಹೆ।ನಿ।ರ।ನೀ।ಸ।
9) ವು।ಲ್ಲಿ।ಪ್ಪಾ।ದೋ।ಳ್ಯಾ।ಚ್ಚ।ಲ।ದ।ಕು।ಕೀ।ಹು
10) ವಾ।ಗ।ತ।ಸಂ।ವೆ।ಗೀ।ಳು।ಶಿ।ಹಾ।ಲೆ।ಡಿ।

**ವಾಟ್ಸ್ ಆ್ಯಪ್ ಮೂಲಕ ಉತ್ತರವನ್ನು ನೀಡಿ. ವಾಟ್ಸಾಪ್ ನಂ.9663028751 ಮೊದಲ ಹತ್ತು ಜನರ ಹೆಸರನ್ನು ಮುಂದಿನ ಪತ್ರಿಕೆಯಲ್ಲಿ ಪ್ರಕಟಿಸಲಾಗುವುದು.**

**ಸಪ್ಟೆಂಬರ್ ತಿಂಗಳ ಜೋಡಿಸಿ ಬರೆಯಿರಿ ಪ್ರಶ್ನೆಗಳಿಗೆ ಉತ್ತರ :**
**1. ಕಣ್ಣಿಗೆ ಕಾಣದ ನಾಟಕಕಾರ 2. ನಾದಮಯ ಈ ಲೋಕವೆಲ 3. ಜೀವ ಹೂವಾಗಿದೆ ಭಾವ ಜೇನಾಗಿದೆ 4. ತನುವು ಮನುವು ಇಂದು ನಿಂದಾಗಿದೆ 5. ಆಗದು ಎಂದು ಕೈ ಕಟ್ಟಿ ಕುಳಿತರೆ 6. ಪ್ರೀತಿನೇ ಆ ದ್ಯಾವ್ರು ತಂದ ಆಸ್ತಿ 7. ಒಲವಿನ ಉಡುಗೊರೆ ಕೊಡಲೇನು 8. ಯಾವ ಹೂವು ಯಾರ ಮುಡಿಗೊ 9. ಆಸೆಯ ಭಾವ ಒಲವಿನ ಜೀವ 10. ನೆರಳನು ಕಾಣದ ಲತೆಯಂತೆ**

**ಪ್ರಶ್ನೆಗೆ ವೇಗವಾಗಿ ಉತ್ತರ ನೀಡಿದವರು :**
**1. ವಿನಯ ಕುಮಾರ್ ಅದ್ಯಪಾಡಿ 2. ರಾಜೇಶ್ವರಿ. ಆರ್. ರಾವ್. ಹಿರಿಯಡ್ಕ 3. ಕೃಷ್ಣಮೂರ್ತಿ ಬ್ರಹ್ಮಾವರ 4. ಮನು ಹೆಬ್ಬಾರ್ ಬೆಳಂಜೆ 5. ವೀಣಾ ಸತ್ಯಶಂಕರ. ಕುಲಶೇಖರ 6. ಸುಮಲತಾ ರಾವ್. ಪಡುಬಿದ್ರಿ 7. ಎಸ್. ಪದ್ಮಲತಾ ಹಿರಿಯಡ್ಕ 8. ಶ್ರಾವ್ಯ ರಾವ್ ಮೈಸೂರು 9. ನಾಗರಾಜ್ ರಾವ್ ಕೂಡ್ಲಿ 10. ಲತಾ .ಸಿ. ಅಂಬಲಪಾಡಿ**



**ಎಮ್. ದೇವಾನಂದ್ ಭಟ್**
Cell : 9845644556
**ಶೋಭಾ ಡಿಜಿಟಲ್**
ಸ್ಟುಡಿಯೋ & ವೀಡಿಯೊ



ಬೆಳ್ವಾಯಿ-574213 (08258)-276177 (O)
ಮೂಡಬಿದ್ರಿ, ಲಾವಂತ ಕಾಂಪ್ಲೆಕ್ಸ್ 9901995655

Ph : 98459 92859
**Ganesh Hebbar & Associates**
CHARTERED ACCOUNTANT
S.M.S.P. Complex, Udupi - 576 101.

**Buying and selling shares as easy as checking your emails**
**Sharekhan Online Trading Account Features:**
- Your bank account gets directly linked to trading account
- Can do direct fund transfer from any of 11 leading banks
- Choose your trading account, Classic, FastTrade, TradeTiger
- Apply online for Stocks, Mutual Funds and IPO's

Contact : Pradeep Rao K.
Tel : 0824 2412903, 9448191028
Navadurga Share Services
Email : navdurga@bp.sharekhan.com
Sharekhan
YOUR GUIDE TO THE FINANCIAL JUNGLE
Visit : www.sharekhan.com
Sharekhan Ltd.: BSE Cash-INB011073351; F&O-INF011073351; CD-INE011073351; NSE - INB/ INF231073330; CD - INE231073330; MCX Stock Exchange : CD - INE261073330 DP: NSDL-IN-DP-NSDL-233-2003; CDSL -IN-DP-CDSL- 271-2004; PMS INP000000662; Mutual Fund: ARN 20669. Sharekhan Commodities Pvt.Ltd.: MCX- 10080(MCX/TCL/CORP/0425); NCDEX -00132; (NCDEX/TCM/CORP/0142); for any complaints email at igc@sharekhan.com. Regd Add:- A-206, Phoenix House, Phoenix Mills Compound, Senapati Bapat Marg, Lower Parel, Mumbai- 400013.Investing in equities & commodities future involves risk. Please carefully read the risk disclosure document as prescribed by SEBI & relevant exchanges and Do's & Don'ts by NCDEX. (Subbroker Regn.Nos: BSE: INS010606122;NSE: INS23106924)

## ಸುರತ್ಕಲ್ : ಆಟಿಡೊಂಜಿ ದಿನ ಆಚರಣೆ




ನಮ್ಮ ಸಂಘದ ವತಿಯಿಂದ ತಾ.4.9.2022 ರಂದು ಆಟಿಡೊಂಜಿದಿನ ಕಾರ್ಯಕ್ರಮವನ್ನು ಮಲ್ಲವಾರ್ ಶ್ರೀ ಭವಾನಿಶಂಕರ್ ರಾಯರ ಮನೆಯಲ್ಲಿ ಆಚರಿಸಲಾಯಿತು. ಮಹಿಳಾ ವೇದಿಕೆಯ ಶ್ರೀಮತಿ ಸುಧಾಮಣಿ ಪಾಲಚಂದ್ರ ಶರ್ಮ ಇವರು ಅತಿಥಿಗಳನ್ನು ಹಾಗೂ ಸದಸ್ಯರನ್ನು ತುಳು ಭಾಷೆಯಲ್ಲಿ ಸ್ವಾಗತಿಸಿ, ಕಾರ್ಯಕ್ರಮ ವನ್ನು ನಡೆಸಿದರು. ಮಹಿಳಾ ವೇದಿಕೆಯ ಅಧ್ಯಕ್ಷರಾದ ಶ್ರೀಮತಿ ಪರಿಮಳ ಪ್ರಶಾಂತ್, ಉಪಾಧ್ಯಕ್ಷರಾದ ಶ್ರೀಮತಿ ವೀಣಾ ಅರವಿಂದ್, ಕಾರ್ಯದರ್ಶಿ ಶ್ರೀಮತಿ ಶರಣ್ಯ ರಾಧಾಕೃಷ್ಣ ಹಾಗೂ ಯುವ ವೇದಿಕೆಯ ಅಧ್ಯಕ್ಷರಾದ ಶ್ರೀ ಕಾರ್ತಿಕ್ ರಾವ್ ಸಹಕರಿಸಿದರು. ಸಮಾಜಬಾಂಧವರಿಗೆ ಅವರವರ ವಯೋಮಿತಿಗೆ ಅನುಗುಣವಾಗಿ ಕೆಲವೊಂದು ಮನೋರಂಜಕ ಆಟಗಳನ್ನು ಆಡಿಸಿದರು. ಎಲ್ಲರೂ ಆಟದಲ್ಲಿ ಭಾಗವಹಿಸಿ ಸಂತಸಪಟ್ಟರು.

ಕೊನೆಯಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ಕೆ.ಮಾಧವ ರಾವ್ ಇವರ ಅಧ್ಯಕ್ಷತೆಯಲ್ಲಿ ಸಭಾ ಕಾರ್ಯಕ್ರಮವು ನಡೆಯಿತು. ವೇದಿಕೆಯಲ್ಲಿ ಸಂಘದ ಪದಾಧಿಕಾರಿಗಳು ಹಾಗೂ ಮಹಿಳಾ ವೇದಿಕೆಯ ಅಧ್ಯಕ್ಷರು ಮತ್ತು ಯುವ ವೇದಿಕೆಯ ಅಧ್ಯಕ್ಷರು ಉಪಸ್ಥಿತರಿದ್ದರು. ಶ್ರೀಮತಿ ಸಾವಿತ್ರಿ ಪುಷ್ಪರಾಜ್ ಇವರು ಕಾರ್ಯಕ್ರಮವನ್ನು ನಿರೂಪಿಸಿದರು. ಆಟಗಳಲ್ಲಿ ಗೆದ್ದವರಿಗೆ ವೇದಿಕೆಯಲ್ಲಿದ್ದ ಗಣ್ಯರು ಬಹುಮಾನವನ್ನು ನೀಡಿ ಪ್ರೋತ್ಸಾಹಿಸಿದರು. ಬಹುಮಾನದ ಪ್ರಾಯೋಜಕತ್ವವನ್ನು ಮಹಿಳಾ ವೇದಿಕೆಯ ಅಧ್ಯಕ್ಷರಾದ ಶ್ರೀಮತಿ ಪರಿಮಳ ಪ್ರಶಾಂತ್ ಹಾಗೂ ಉಪಾಧ್ಯಕ್ಷರಾದ ಶ್ರೀಮತಿ ವೀಣಾ ಅರವಿಂದ್ ಮಾಡಿದರು. ಕಾರ್ಯಕ್ರಮದ ಬಗ್ಗೆ ಶ್ರೀಮತಿ ಕುಸುಮಾ ಮಾಧವ ರಾವ್ ಹಾಗೂ ಡಾ. ಹರಿಹರ ಪ್ರಸಾದ್ ಇವರು ತಮ್ಮ ಅನಿಸಿಕೆಗಳನ್ನು ತಿಳಿಸಿದರು.

ಸಂಘದ ಅಧ್ಯಕ್ಷರು ತಮ್ಮ ಭಾಷಣದಲ್ಲಿ ಸಂಘದ ಸದಸ್ಯರು ಐಕ್ಯಮತ್ಯವನ್ನು ಕಾಯ್ದುಕೊಳ್ಳುವಂತೆ ವಿನಂತಿಸಿ ಕಾರ್ಯಕ್ರಮವನ್ನು ಮುಕಕಂಠದಿಂದ ಶ್ಲಾಘಿಸಿದರು.

ಮಹಿಳಾ ವೇದಿಕೆಯ ಅಧ್ಯಕ್ಷರಾದ ಶ್ರೀಮತಿ ಪರಿಮಳ ಪ್ರಶಾಂತ್ ಧನ್ಯವಾದ ವನ್ನು ಅರ್ಪಿಸಿದರು. ನಂತರ ಶ್ರೀ ಪ್ರವೀಣ್ ಕುಮಾರ್ ಸಹೋದರರು ಆಟಿ ತಿಂಗಳ ಖಾದ್ಯಗಳನ್ನು ತಯಾರಿಸಿ ಎಲ್ಲರಿಗೂ ಉಣ ಬಡಿಸಿದರು.

## ಶುಭ ಜನನ

ಬೊಕ್ಕಸ ಚಂದ್ರಶೇಖರ ರಾವ್ ಹಾಗೂ ಶ್ರೀಮತಿ ಕವಿತಾ ಇವರ ಪುತ್ರ ಶ್ರೀ ಚೇತನ್ ರಾವ್ ಮತ್ತು ಶ್ರೀ ಪ್ರಕಾಶ್ ರಾವ್ ಹಾಗೂ ಶ್ರೀಮತಿ ಶ್ರೀಲತಾ ಪ್ರಕಾಶ್ ಇವರ ಪುತ್ರಿ ಶ್ರೀಮತಿ ದಿಶಾರಾವ್‌ರವರಿಗೆ ತಾ.15.9.2022 ರಂದು ಹೆಣ್ಣು ಮಗುವಿನ ಜನನ.

## ಗೃಹಪ್ರವೇಶ

ಪಾವಂಜೆ ಭಾಗ್ಯಚಂದ್ರರವರ ಪುತ್ರ ಭರತ್‌ರಶ್ಮಿಯುವರು ಬೆಂಗಳೂರಿನ ರಾಮಮೂರ್ತಿ ನಗರದಲ್ಲಿ ತಮ್ಮ ನೂತನ ಮನೆ "ಅನವರತ" ಗೃಹಪ್ರವೇಶವು ವಿಜ್ರಂಭಣೆಯಿಂದ ನೆರವೇರಿತು.

## ಸಾಮೂಹಿಕ ಗಣಹೋಮ

ಸೆಪ್ಟಂಬರ್ ತಿಂಗಳ ಅಂಗಾರಕ ಸಂಕಷ್ಟಿ ದಿನದಂದು ಸಾಮೂಹಿಕ ಗಣಹೋಮವು ದೇವಸ್ಥಾನದ ಯಾಗಶಾಲೆಯಲ್ಲಿ ನೆರವೇರಿತು. ಶ್ರೀಮತಿ ಸುಕನ್ಯಾ ಹಾಗೂ ಪಿ. ಸತೀಶ್ ರಾವ್ ದಂಪತಿಯವರಿಂದ ವಿಶೇಷ ಅಪ್ಪಸೇವೆ ನೆರವೇರಿತು ಮತ್ತು ಗಣಹೋಮಕ್ಕೆ ಕರ್ತೃಗಳಾಗಿ ಸಹಕರಿಸಿದರು. ಅದೇ ದಿನ ಶ್ರೀ ಶಾರದಾ ಪತ್ರಿಕೆಯ ರವಾನೆ ಕಾರ್ಯನೆರವೇರಿತು.

## ವಿಳಾಸ ಬದಲಾವಣೆ

**ಉಮೇಶ್ ರಾವ್, 108, ಪ್ರತೀಕ್‌ಪ್ರೈಮ್, ಸಿಟಿ ಆಸ್ಪತ್ರೆ ಹತ್ತಿರ, ಕಾಡಬೆಟ್ಟು, ಉಡುಪಿ–576101. ಮೊ : 8073346367**

## ಕೊಡವೂರು ಪಿ. ಬಾಲಕೃಷ್ಣ ಇವರಿಗೆ ಶ್ರದ್ಧಾಂಜಲಿ



ಪಿ. ಬಾಲಕೃಷ್ಣ ಅವರಿಗೆ ಬೆಂಗಳೂರು ಕೋಡಿಗೆಹಳ್ಳಿಯ ಜ್ಞಾನಶಕ್ತಿ ಸುಬ್ರಹ್ಮಣ್ಯ ಸಭಾಂಗಣದಲ್ಲಿ ತಾ.01–08–22ರಂದು ಶ್ರದ್ಧಾಂಜಲಿ ಅರ್ಪಿಸಲಾಯಿತು. ಆ ದಿನ ಪುರೋಹಿತರಾದ ಕೇಶವ ಭಟ್, ಬಿ.ಗೋವಿಂದ ರಾವ್, ಡಾ.ರಮೇಶ್ ರಾವ್ ಚೆಂಡುಕಳ, ಹೆಬ್ಬೂರಿನ ಲಕ್ಷ್ಮೀಕಾಂತ್, ಭಾಗ್ಯಚಂದ್ರ ರಾವ್ ಬೆಂಗಳೂರು ಜ್ಞಾನಶಕ್ತಿ ಸುಬ್ರಹ್ಮಣ್ಯ ಸಭಾ, ಮೃತರ ಸಹೋದರ ಪಿ. ಬಾಲಗಂಗಾಧರ, ಮತ್ತು ರಶ್ಮಿ ವೀರೇಶ್ ರಾವ್ ಶ್ರದ್ಧಾಜಲಿ ಅರ್ಪಿಸಿ ಮಾತನಾಡಿದರು.

ಶ್ರೀಮತಿ ಮತ್ತು ಶ್ರೀ ಉದಯಚಂದ್ರ ರಾವ್ ನಂದಳಿಕೆ

**ಯಶಸ್ವೀ ಎಂಟರ್‌ಪ್ರೈಸೆಸ್**

ಶಾಂಭವಿ ಹೈಟ್ಸ್, ಸೈಂಟ್‌ಮೇರೀಸ್ ಕಾಲೇಜು ಎದುರು, ಮುಖ್ಯರಸ್ತೆ, ಶಿರ್ವ - 574 116.
ಇ-ಮೇಲ್ : udayarao42@gmail.com

Z Gift Item Z Stationary Z Xerox Z Lamination
Z Spiral Binding Z Mobile & DTC Recharge Z Tours & Travels
Z Courier Service Z Sports Items & Toys Z Ice Creams




RAJESH POWER PRESS
PRINTERS & PUBLISHERS
DARBE, PUTTUR, DA. KA. - 574 202.
KARNATAKA STATE, SOUTH INDIA.
Ph : (08251) 231696, 231697 & 322386
E-mail : msraghunathrao@hotmail.com
QUALITY FIRST AND ALWAYS

## ಶ್ರೀ ಶಾರದಾ ದೇವಸ್ಥಾನ, ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ

**(ದರ್ಶನದ ಸಮಯ ಬೆಳಿಗ್ಗೆ 8-00ರಿಂದ 12-00, ಸಂಜೆ 4-00ರಿಂದ 8-00)**

ಮಂಗಳಾರತಿ : ಪ್ರತಿ ದಿನ ಬೆಳಿಗ್ಗೆ 8–00, ಮಧ್ಯಾಹ್ನ 12–00 ಹಾಗೂ ರಾತ್ರಿ 7–30ಕ್ಕೆ
ಪ್ರತಿ ಮಂಗಳವಾರ : **ಸೌಂದರ್ಯಲಹರಿ ಪಾರಾಯಣ** ಸಂಜೆ 5ರಿಂದ } ಮಹಿಳಾ ವೇದಿಕೆಯಿಂದ
ಪ್ರತಿ ಶುಕ್ರವಾರ : **ಲಲಿತಾ ಸಹಸ್ರನಾಮ ಮತ್ತು ದೇವರ ಭಜನೆ** ಸಂಜೆ 5ರಿಂದ } ಮಹಿಳಾ ವೇದಿಕೆಯಿಂದ
ಪ್ರತಿ ಆದಿತ್ಯವಾರ : ಸ್ವಾಧ್ಯಾಯ ಸಮಿತಿಯವರಿಂದ ''**ಪಾರಾಯಣ**'' ಸಂಜೆ ಗಂಟೆ 4–30ರಿಂದ

**ತಾ.12-11-2022 ಸಂಕಷ್ಟಹರ ಚತುರ್ಥಿಯಂದು ''ಸಾಮೂಹಿಕ ಗಣಹೋಮ'' ಬೆಳಿಗ್ಗೆ ಗಂಟೆ 10-00ರಿಂದ (ಸೇವಾ ಶುಲ್ಕ ರೂ.100/-)**

**ತಾ.29-10-2022 ಮೂಲಾ ನಕ್ಷತ್ರದ ದಿನದಂದು ಶ್ರೀದೇವಿಗೆ ಸಹಸ್ರನಾಮಾರ್ಚನೆ (ಸಮಯ ಸಂಜೆ 5-00ರಿಂದ 6-00ರ ವರೆಗೆ)**

**ತಾ.29-10-2022 ಮತ್ತು ತಾ.13-11-2022 ಪಂಚಮಿಯಂದು ''ನಾಗದೇವರಿಗೆ ತನುಸೇವೆ'' ಬೆಳಿಗ್ಗೆ 9-00ರಿಂದ ಮಧ್ಯಾಹ್ನ 12-00 ಗಂಟೆಯ ತನಕ**

**ಭಕ್ತಾದಿಗಳೆಲ್ಲರಿಗೂ ಆದರದ ಸ್ವಾಗತ**

### ತುಲಾಮಾಸದ ವಿಶೇಷ ದಿನಗಳು

| | | | |
|---|---|---|---|
| 17.10.2022 | ತುಲಾ ಸಂಕ್ರಮಣ | 04.11.2022 | ಸರ್ವೈಕಾದಶಿ |
| 21.10.2022 | ಸರ್ವೈಕಾದಶಿ | 05.11.2022 | ಉತ್ಥಾನ ದ್ವಾದಶಿ, ತುಳಸೀಪೂಜೆ, ಉಡುಪಿ ಲಕ್ಷದೀಪೋತ್ಸವ ಆರಂಭ |
| 23.10.2022 | ಸಾಯಂ ಜಲಪೂರಣಂ, ಯಮದೀಪ | | |
| 24.10.2022 | ಬೆಳಿಗ್ಗೆ ಚಂದ್ರೋದಯ 5.12ಕ್ಕೆ ತೈಲಾಭ್ಯಂಗ, ನರಕ ಚತುರ್ದಶೀ, ಯಮತರ್ಪಣಂ, ಆಕಾಶದೀಪ, ಬಲೀಂದ್ರ ಪೂಜಾ, ಧನಲಕ್ಷ್ಮೀ ಪೂಜಾ ಹಾಗೂ ದೀಪಾವಳಿ | 08.11.2022 | ಹುಣ್ಣಿಮೆ, ಉಡುಪಿ ಲಕ್ಷದೀಪೋತ್ಸವ ಸಮಾಪ್ತಿ ಗ್ರಸ್ತೋದಯ ಚಂದ್ರಗ್ರಹಣ |
| 25.10.2022 | ಅಮಾವಾಸ್ಯೆ ಗ್ರಸ್ತಾಸ್ತ ಸೂರ್ಯಗ್ರಹಣ | 09.11.2022 | ಶರದೃತು ಕಾರ್ತಿಕ ಮಾಸದ ಕೃಷ್ಣ ಪಕ್ಷಾರಂಭ |
| 26.10.2022 | ಶರದೃತು ಕಾರ್ತಿಕ ಮಾಸದ ಶುಕ್ಲ ಪಕ್ಷಾರಂಭ, ಚಂದ್ರದರ್ಶನ ಗೋಪೂಜೆ, ಅಂಗಡಿಪೂಜೆ, ತುಳಸೀ ಪೂಜಾರಂಭ | 12.11.2022 | ಸಂಕಷ್ಟಹರ ಚತುರ್ಥಿ ಚಂದ್ರೋದಯ ರಾತ್ರಿ 9.10 |
| | | 16.11.2022 | ವೃಶ್ಚಿಕ ಸಂಕ್ರಮಣ |

## ನಿಧನ



### ಶ್ರೀ ಪಂಜ ಕೊಯಿಕುಡೆ ಶ್ರೀಧರ್ ರಾವ್

ಶ್ರೀ ಪಂಜ ಕೊಯಿಕುಡೆ ಶ್ರೀಧರ್ ರಾವ್ ಅವರು ತಮ್ಮ 96 ನೇ ವಯಸ್ಸಿನಲ್ಲಿ ತಾ. 16–09–2022ರಂದು ಮಂಗಳೂರಿನಲ್ಲಿ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರಿ, ನಾಲ್ವರು ಪುತ್ರರನ್ನು ಅಗಲಿರುತ್ತಾರೆ.

★★★★ ★★★★



### ಶ್ರೀಮತಿ ಗಂಗಾರತ್ನ

ದಿವಂಗತ ಶ್ರೀ ಮೋರಾಜೆ ಎಸ್. ಆನಂದ್ ರಾವ್ ಅವರ ಪತ್ನಿ ಶ್ರೀಮತಿ ಗಂಗಾರತ್ನ ಅವರು ತಮ್ಮ 93 ನೇ ವಯಸ್ಸಿನಲ್ಲಿ ತಾ.16.09.2022 ರಂದು ಬೆಂಗಳೂರಿನಲ್ಲಿ ನಿಧನರಾದರು. ಮೃತರು ನಾಲ್ವರು ಪುತ್ರರನ್ನು ಅಗಲಿರುತ್ತಾರೆ.

★★★★ ★★★★



### ಶ್ರೀ ಚಂದ್ರಶೇಖರ ಉಬರಳೆ

ಶ್ರೀ ಚಂದ್ರಶೇಖರ ಉಬರಳೆ ತಮ್ಮ 79ನೇ ವಯಸ್ಸಿನಲ್ಲಿ ಬೆಂಗಳೂರಿನ ತಮ್ಮ ಮಗಳ ನಿವಾಸದಲ್ಲಿ ನಿಧನರಾದರು. ಮೃತರು ಪತ್ನಿ, ಈರ್ವರು ಪುತ್ರಿಯರನ್ನು ಅಗಲಿರುತ್ತಾರೆ.

★★★★ ★★★★



### ಶ್ರೀಮತಿ ಅನಸೂಯ ಹೆಚ್.ಭಟ್

ದಿವಂಗತ ಹೊಯಿಗೆಗುಡ್ಡೆ ಹಿರಿಯಣ್ಣ ಭಟ್ ಅವರ ಪತ್ನಿ ಶ್ರೀಮತಿ ಅನಸೂಯ ಹೆಚ್.ಭಟ್ ಅವರು ತಮ್ಮ 88ನೇ ವಯಸ್ಸಿನಲ್ಲಿ ತಾ. 21.09.2022 ರಂದು ಮಂಗಳೂರಿನಲ್ಲಿ ನಿಧನರಾದರು. ಮೃತರು ಆರು ಪುತ್ರರನ್ನು ಅಗಲಿರುತ್ತಾರೆ.

★★★★ ★★★★



### ಶ್ರೀಮತಿ ಪದ್ಮಾವತಿ

ಪರ್ಕಳ ಗೋವಿಂದ ರಾವ್ ಅವರ ಪತ್ನಿ ಶ್ರೀಮತಿ ಪದ್ಮಾವತಿ ಅವರು ತಮ್ಮ 88ನೇ ವಯಸ್ಸಿನಲ್ಲಿ ತಾ.12.09.2022ರಂದು ಉಡುಪಿಯ ಸ್ವಗೃದಲ್ಲಿ ನಿಧನರಾದರು. ಮೃತರು ಪತಿ, ಇಬ್ಬರು ಪುತ್ರರು, ಓರ್ವ ಪುತ್ರಿಯನ್ನು ಅಗಲಿರುತ್ತಾರೆ.

★★★★ ★★★★

### ಮುರಾರಿ ರಾವ್

ಕಾರ್ಕಳದ ದುರ್ಗಾ ಗ್ರಾಮದ ಮುರಾರಿ ರಾವ್ (75ವರ್ಷ) ಅವರು ಸೆಪ್ಟೆಂಬರ್ 7ರಂದು ಸ್ವಗ್ರಹದಲ್ಲಿ ನಿಧನರಾದರು. ಅವರು ಪತ್ನಿ, ಪುತ್ರ ಮತ್ತು ಪುತ್ರಿಯನ್ನು ಅಗಲಿದ್ದಾರೆ. ದುರ್ಗಾ ಗ್ರಾಮ ಪಂಚಾಯತ್ ಸದಸ್ಯರಾಗಿ, ಗಣೇಶೋತ್ಸವ ಸಮಿತಿಯಲ್ಲಿ ಪದಾಧಿಕಾರಿಗಳಾಗಿ ಕಾರ್ಯನಿರ್ವಹಿಸಿದ್ದರು.

PRODUCTS ARE AVAILABLE AT ATTRACTIVE DISCOUNT PRICES




BATTERY PLANET
SALES & SERVICES
Dealers : Inverter, Batteries, Gas Geysers & Solar Water Heaters
Udupi, Padubidri, Contact : 94824 57926, 99455 43051
* Inverter+battery rates starts from Rs. 11,990

## ಶ್ರೀಮತಿ ಪಿ.ಎಸ್. ಸುಧಾಮಣಿ ಇವರಿಗೆ "ಅಕ್ಷರ ಸಿರಿ" ಪ್ರಶಸ್ತಿ



ಧಾರವಾಡ ವಿದ್ಯಾಗಿರಿಯ ಜೆ.ಎಸ್.ಎಸ್. ಕನ್ನಡ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯಾಧ್ಯಾಪಕಿಯರಾದ ಶ್ರೀಮತಿ ಪಿ.ಎಸ್. ಸುಧಾಮಣಿ ಇವರಿಗೆ ಕರ್ನಾಟಕ ರಾಜ್ಯಮಕ್ಕಳ ಸಾಹಿತ್ಯ ಪರಿಷತ್ತು ಮತ್ತು ಕನ್ನಡ ಮತ್ತು ಸಾಂಸ್ಕೃತಿಕ ಇಲಾಖೆ ಧಾರವಾಡ ಇವರ ಸಹಯೋಗದಲ್ಲಿ 2022-23ನೇ ಸಾಲಿನಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಿದ ವ್ಯಕ್ತಿಗೆ ನೀಡಲಾಗುವ ಜಿಲ್ಲಾಮಟ್ಟದ "ಅಕ್ಷರ ಸಿರಿ" ಪ್ರಶಸ್ತಿಯನ್ನು ತಾ.04.09.2022ರಂದು ನೀಡಿ ಗೌರವಿಸಲಾಯಿತು. ಈ ಹಿಂದೆಯೂ ಇವರು ಧಾರವಾಡ ಶಹರವಲಯದ ತಾಲೂಕು ಮಟ್ಟದ ಉತ್ತಮ ಶಿಕ್ಷಕಿ ಪ್ರಶಸ್ತಿಗೆ ಭಾಜನರಾಗಿರುತ್ತಾರೆ.

## ಅಜಿತ್ ರಾವ್‌ರಿಗೆ ಸನ್ಮಾನ





ಕರ್ನಾಟಕ ಬ್ಯಾಂಕ್, ಕಲಾಕಿರಣ್ ಕ್ಲಬ್ ಹಾಗೂ ಕೃಷಿ ಸಂಘ ಇವರ ಜಂಟಿ ಆಶ್ರಯದಲ್ಲಿ ನಡೆದ ಕಾರ್ಯಕ್ರಮದಲ್ಲಿ ಆಧುನಿಕ ಹೈನುಗಾರಿಗೆಗಾಗಿ ಶ್ರೀ ಅಜಿತ್ ರಾವ್ ಇವರನ್ನು ಸನ್ಮಾನಿಸಲಾಯಿತು. ಅದೇ ರೀತಿ ಉಡುಪಿ ಭೀಮಾ ಜ್ಯುವೆಲ್ಲರ್ಸ್‌ನವರ ವಾರ್ಷಿಕೋತ್ಸವದ ಸಂದರ್ಭದಲ್ಲಿ ಸ್ವಾದಿಷ್ಟ ಉಪಹಾರ ಹಾಗೂ ಭೋಜನ ವ್ಯವಸ್ಥೆಯಲ್ಲಿ ಪ್ರಸಿದ್ಧರಾದ ಇವರ ಸೇವೆಯನ್ನು ಗುರುತಿಸಿ ಭೀಮಾ ಜುವೆಲ್ಲರ್ಸ್‌ನ ವತಿಯಿಂದ ಸನ್ಮಾನಿಸಲಾಯಿತು.



## ಭಜನಾ ಮಂಡಳಿ ಅಧ್ಯಕ್ಷರಾಗಿ ಶ್ರೀ ನಾಗಭೂಷಣ್ ರಾವ್

ಮಜೂರು ಉಳಿಯಾರು ಶ್ರೀ ದುರ್ಗಾಪರಮೇಶ್ವರೀ ಭಜನಾ ಮಂಡಳಿಗೆ ಅಧ್ಯಕ್ಷರಾಗಿ ಶ್ರೀ ನಾಗಭೂಷಣ್ ರಾವ್ ಕರಂದಾಡಿ ಇವರು ಅವಿರೋಧ ಆಯ್ಕೆಯಾಗಿದ್ದಾರೆ. ಶ್ರೀಯುತರು ಹಲವಾರು ಸಂಘ ಸಂಸ್ಥೆಗಳಲ್ಲಿ ಪದಾಧಿಕಾರಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ

## ಶ್ರೀ ಶಂಕರ ಭಗವತ್ಪಾದಾಚಾರ್ಯರ ಮೂರ್ತಿ ಪ್ರತಿಷ್ಠಾಪನೆ



ಪಡುಬಿದ್ರಿ ಶ್ರೀ ಬಾಲಗಣಪತಿ ಪ್ರಸನ್ನ ಪಾರ್ವತಿ ದೇವಸ್ಥಾನದಲ್ಲಿ ತಾ. 28.09.2022ನೇ ಬುಧವಾರದಂದು ಶ್ರೀ ಶಂಕರ ಭಗವತ್ಪಾದಾಚಾರ್ಯರ ಮೂರ್ತಿಯನ್ನು ಬ್ರಹ್ಮಶ್ರೀ ವಾಗೀಶ ಶಾಸ್ತ್ರಿಯವರ ನೇತೃತ್ವದಲ್ಲಿ ಪ್ರತಿಷ್ಠಾಪಿಸಲಾಯಿತು. ತಾ. 27.09.2022 ರಂದು ಭಗವತ್ಪಾದರ ಮೂರ್ತಿಯನ್ನು ಶೃಂಗೇರಿ ಮಠದಲ್ಲಿ ಜಗದ್ಗುರು ಶ್ರೀ ವಿಧುಶೇಖರ ಭಾರತೀ ಸನ್ನಿಧಾನಂಗಳವರ ಆಶೀರ್ವಾದದಿಂದ ಶ್ರೀ ಕರುಣಾಕರ ಬೆಳ್ಳೆ, ಉಲ್ಲಾಸರಾವ್, ಜಗದಾಭಿರಾಮ ಸ್ವಾಮಿ, ನಾಗರಾಜ ರಾವ್‌ರವರ ನೇತೃತ್ವದಲ್ಲಿ ನಂದಿಕೂರು ಶ್ರೀ ಜನಾರ್ಧನ ರಾವ್ ಮನೆಗೆ ಬೆಳಿಗ್ಗೆ 12.00 ಗಂಟೆಗೆ ಬರಮಾಡಿಕೊಳ್ಳಲಾಯಿತು. ಸಂಜೆ 4.30 ಕ್ಕೆ ಭಗವತ್ಪಾದರ ಮೂರ್ತಿಯ ಶೋಭಯಾತ್ರೆಯು ವಾದ್ಯಘೋಷದೊಂದಿಗೆ ಕಾರ್ಕಳ ರಾಜ್ಯ ಹೆದ್ದಾರಿಯಿಂದ ರಾಷ್ಟ್ರೀಯ ಹೆದ್ದಾರಿ 66 ರ ಮುಖೇನ ಸಾಗಿ ಶ್ರೀ ಕ್ಷೇತ್ರದ ದ್ವಾರದಲ್ಲಿ ಬರಮಾಡಿಕೊಳ್ಳಲಾಯಿತು. ತಾ. 28.09.2022 ರಂದು ಭಗವತ್ಪಾದರ ಮೂರ್ತಿಯ ಪ್ರತಿಷ್ಠಾಪನೆ ಕಾರ್ಯಕ್ರಮದ ನಂತರ ಬೆಳುವಾಯಿ ಶ್ರೀ ದೇವಾನಂದ ಭಟ್‌ರ ಸಾರಥ್ಯದಲ್ಲಿ "ಶ್ರೀ ಶಂಕರ ವಿಜಯ" ಎಂಬ ಪೌರಾಣಿಕ ಯಕ್ಷಗಾನ ತಾಳ ಮದ್ದಳೆ ಜರಗಿತು. ಈ ಎಲ್ಲಾ ಕಾರ್ಯಕ್ರಮದಲ್ಲಿ ಸುಮಾರು 300 ಜನ ಭಕ್ತಾದಿಗಳು ದೇವರ ಅನ್ನ ಪ್ರಸಾದವನ್ನು ಸ್ವೀಕರಿಸಿದರು.

## ನೀಟ್ ಪರೀಕ್ಷೆಯಲ್ಲಿ ಸಾತ್ವಿಕ್‌ಗೆ ದೇಶಕ್ಕೆ 1443ನೇ ರ್‍ಯಾಂಕ್



ಪಟ್ಟಣದ ಡಾ। ಸಂತೋಷ್ ಮತ್ತು ಡಾ। ಗೀತಾ ಅವರ ಪುತ್ರ ಎ. ಎಸ್. ಸಾತ್ವಿಕ್ ವೈದ್ಯಕೀಯ ಕಾಲೇಜುಗಳ ಪ್ರವೇಶಕ್ಕಾಗಿ ನಡೆಸಲಾಗುವ 2022ರಲ್ಲಿನ ನೀಟ್ ಪರೀಕ್ಷೆಯಲ್ಲಿ 671 ಅಂಕ ಪಡೆಯುವ ಮೂಲಕ ರಾಷ್ಟ್ರಮಟ್ಟದಲ್ಲಿ 1443ನೇ ರ್‍ಯಾಂಕ್‌ಗಳಿಸಿದ್ದು ಕ್ಯಾಟಗರಿ ರ್‍ಯಾಂಕ್‌ನಲ್ಲಿ 877 ಶ್ರೇಣಿಯಲ್ಲಿದ್ದಾರೆ. ಮಂಗಳೂರಿನ ಎಕ್ಸ್‌ಪರ್ಟ್ ಪಿಯು ಕಾಲೇಜಿನಲ್ಲಿ ವ್ಯಾಸಂಗ ಮಾಡಿರುವ ಇವರು 2021ರ ಕಿಶೋರ ವೈಜ್ಞಾನಿಕ್ ಪ್ರೋತ್ಸಾಹಣ್ ಯೋಜನಾ ಪರೀಕ್ಷೆಯಲ್ಲಿ ರಾಷ್ಟ್ರಕ್ಕೆ 552ನೇ ಶ್ರೇಣಿ ತಮ್ಮದಾಗಿಸಿಕೊಂಡಿದ್ದರು. ಹತ್ತನೇ ತರಗತಿಯಲ್ಲಿ ಶೇ.99.52 ಅಂಕ ಪಡೆದು ರಾಜ್ಯಕ್ಕೆ 4ನೇ ರ್‍ಯಾಂಕ್ ಪಡೆದಿದ್ದರು. ದ್ವಿತೀಯ ಪಿಯುಸಿಯಲ್ಲಿ ಶೇ.97.3 ಫಲಿತಾಂಶ ಪಡೆದಿದ್ದರು. ಸಂಸ್ಕೃತ, ಫಿಸಿಕ್ಸ್, ಕೆಮಿಸ್ಟ್ರಿ, ಗಣಿತಗಳಲ್ಲಿ ಶೇ.100 ಅಂಕ ಪಡೆದಿದ್ದರು. 2022ರ ಇಂಜಿನಿಯರಿಂಗ್ ವಿಭಾಗದಲ್ಲಿ ರಾಷ್ಟ್ರಮಟ್ಟದಲ್ಲಿ ನಡೆಸಲಾಗುವ ಜೆಇಇ ಮೈನ್ಸ್ ಪ್ರಥಮ ಹಂತದ ಪರೀಕ್ಷೆಯಲ್ಲಿ ಶೇ.98.56 ಅಂಕ ಪಡೆದಿದ್ದಾರೆ. ಸಿಇಟಿ ಪರೀಕ್ಷೆಯಲ್ಲಿ ಇಂಜಿನಿಯರಿಂಗ್ 275 ರ್‍ಯಾಂಕ್, ಬಿ.ಎನ್.ವೈ.ಎಸ್. 52, ಅಗ್ರಿಕಲ್ಚರ್ ಬಿ.ಎಸ್ಸಿ 40, ವೆಟರ್ನರಿ ಸೈನ್ಸ್ 50, ಬಿ. ಫಾರ್ಮ 59, ಡಿ ಫಾರ್ಮ 59ನೇ ರ್‍ಯಾಂಕ್ ಗಳಿಸಿದ್ದಾರೆ. ಎ.ಎಸ್.ಸಾತ್ವಿಕ್‌ರವರ ಸಾಧನೆ ಕೇವಲ ತಾಲೂಕು ಹಾಗೂ ಜಿಲ್ಲೆಗಳಿಗೆ ಸೀಮಿತವಾಗಿರದೇ ನಮ್ಮ ಸಮಸ್ತ ಸ್ಥಾನಿಕ ಸಮಾಜಕ್ಕೆ ಹೆಮ್ಮೆ ತರುವ ವಿಷಯವಾಗಿದೆ.

## ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಅಧ್ಯಕ್ಷ ಶ್ರೀ ಅಶೋಕ್ ಹಾರನಹಳ್ಳಿ ಅವರಿಗೆ ಅಭಿನಂದನೆ



ಅರ್ಧಶತಮಾನದ ಸುದೀರ್ಘ ಇತಿಹಾಸವುಳ್ಳ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ನೂತನ ಅಧ್ಯಕ್ಷರು, ಕರ್ನಾಟಕ ರಾಜ್ಯ ಸರಕಾರದ ಮಾಜಿ ಅಡ್ವಕೇಟ್ ಜನರಲ್ ಆಗಿದ್ದ, ಹಿರಿಯ ನ್ಯಾಯವಾದಿಗಳು ಮತ್ತು ಸಮಾಜಸೇವಕರು ಆಗಿರುವ ಸನ್ಮಾನ್ಯ ಶ್ರೀ ಅಶೋಕ್ ಹಾರನಹಳ್ಳಿ ಅವರು ಮಹಾಸಭಾದ ಅಧ್ಯಕ್ಷ ಸ್ಥಾನವನ್ನು ವಹಿಸಿಕೊಂಡ ನಂತರ ಪ್ರಪ್ರಥಮ ಬಾರಿಗೆ ದ ಕ ಜಿಲ್ಲೆಗೆ ಭೇಟಿ ನೀಡಿದರು, ಈ ಸುಸಂದರ್ಭದಲ್ಲಿ ಶ್ರೀ ಅಶೋಕ್ ಹಾರನಹಳ್ಳಿ ಅವರಿಗೆ ದಕ್ಷಿಣ ಕನ್ನಡ ಜಿಲ್ಲೆಯ ಸರ್ವ ಬ್ರಾಹ್ಮಣ ಬಂಧುಗಳ ಪರವಾಗಿ ಗೌರವಾರ್ಪಣೆಯ ಕಾರ್ಯಕ್ರಮ ತಾ.18.09.2022ರಂದು ಅಪರಾಹ್ನ 3 ಗಂಟೆಗೆ ಮಂಗಳೂರು ನಗರದ ನಂತೂರು ವೃತ್ತದ ಬಳಿಯ ಪದವು ಎಂಬಲ್ಲಿರುವ ಶ್ರೀಭಾರತೀ ಕಾಲೇಜು ಆವರಣದ ಶಂಕರಶ್ರೀ ಸಭಾಂಗಣದಲ್ಲಿ ಜರಗಿತು. ಇದೇ ಸಂದರ್ಭದಲ್ಲಿ ಸನ್ಮಾನ್ಯ ಶ್ರೀ ಅಶೋಕ್ ಹಾರನಹಳ್ಳಿ ಅವರು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಜಿಲ್ಲಾ ಕಚೇರಿಯನ್ನು ಉದ್ಘಾಟಿಸಿದರು

## "ಲಕ್ಷ ತುಳಸಿ ಅರ್ಚನೆ" ಹಾಗೂ "ಪುಷ್ಪಾರ್ಚನೆ"



ದಿ. 17-09-2022 ಶನಿವಾರ ಕನ್ಯಾ ಸಂಕ್ರಮಣದ ದಿನ ಪಾದೆಬೆಟ್ಟು ಶ್ರೀ ವಿಷ್ಣುಮೂರ್ತಿ ದೇವಸ್ಥಾನದಲ್ಲಿ ಕ್ಷೇತ್ರದ ತಂತ್ರಿವರೇಣ್ಯರಾದ ಬ್ರಹ್ಮಶ್ರೀ ವಾಗೀಶ ಶಾಸ್ತ್ರಿಯವರ ಮಾರ್ಗದರ್ಶನದಲ್ಲಿ "ಲಕ್ಷ ತುಳಸಿ ಅರ್ಚನೆ" ಹಾಗೂ "ಪುಷ್ಪಾರ್ಚನೆ" ನಡೆಯಿತು. ಅಖಿಲ ಸ್ಥಾನಿಕ ಬ್ರಾಹ್ಮಣ ಪುರೋಹಿತರ ಮತ್ತು ಅರ್ಚಕರ ಸಂಘದ ವತಿಯಿಂದ ನಡೆದ ಈ ಕಾರ್ಯಕ್ರಮದಲ್ಲಿ ಸುಮಾರು ಇನ್ನೂರೈವತ್ತಕ್ಕೂ ಹೆಚ್ಚಿನ ಭಕ್ತರು ಭಾಗವಹಿಸಿದರು. ಶ್ರಾವಣ ಮಾಸದಲ್ಲಿ ಪ್ರತಿದಿನ ಸಂಜೆ ದೇವಳದಲ್ಲಿ ಒಂದು ತಿಂಗಳ ಪರ್ಯಂತ (17.09.2022ರ ವರೆಗೆ) ಭಕ್ತಾಧಿಗಳಿಂದ ಹೂವಿನ ಪೂಜೆಯು ನೆರವೇರಿತು. ಆಡಳಿತ ಮೊಕ್ತೇಸರರಾದ ಬಿ. ಜಯರಾಮ ರಾವ್ ಕೃತಜ್ಞತೆಯನ್ನು ಅರ್ಪಿಸಿದರು.



ಹಿಂದಿಯಲ್ಲಿ ಶ್ರೇಷ್ಠ ಸಾಧಕರಾಗಿ ಬೆಂಗಳೂರಿನಲ್ಲಿ ಸನ್ಮಾನ ಸ್ವೀಕರಿಸಿದ ನಮ್ಮ ಸಮಾಜದ ಹಿರಿಯರಾದ ಶ್ರೀಯುತ ರಾಯಿ ರಾಜಕುಮಾರ ಇವರಿಗೆ ಅಭಿನಂದನೆಗಳು.



ಡಾ. ಪರೀಕ ಗೋಪಾಲ ಕೃಷ್ಣ ರಾವ್ ಅವರು ತಮ್ಮ ಎಂಬತ್ತೈದನೇ ಜನ್ಮ ದಿನೋತ್ಸವವನ್ನು ತಾ. 18.09.22ರಂದು ಮೂಡು ಅಲೆವೂರು ವಿಷ್ಣುಮೂರ್ತಿ ದೇವಸ್ಥಾನದಲ್ಲಿ ವಿಷ್ಣು ಸಹಸ್ರನಾಮ ಹೋಮವನ್ನು ಬಂಧು ಬಾಂಧವರುಗೂಡಿ ಆಚರಿಸಿದರು.



**ದಿನಾಂಕ 26.09.2022ರಂದು ನಮ್ಮ ಸಂಘದ ಜತೆಕಾರ್ಯದರ್ಶಿ ಟಿ.ಜಗದೀಶ ರಾವ್‌ವರಿಗೆ ಷಷ್ಠ್ಯಬ್ದಿಶಾಂತಿ ನೆರವೇರಿತು.**

# ನವರಾತ್ರಿ ಭಜನಾ ಕಾರ್ಯಕ್ರಮ



ಶ್ರೀ ಶಾಂಕರ ತತ್ತ್ವ ಪ್ರಸಾರ ಅಭಿಯಾನ, ಉಡುಪಿ ಜಿಲ್ಲೆ, ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ, ಕುಂಜಿಬೆಟ್ಟು, ಉಡುಪಿ, ಹಾಗೂ ಶ್ರೀ ಶಾರದಾ ದೇವಸ್ಥಾನ, ಕುಂಜಿಬೆಟ್ಟು, ಉಡುಪಿ, ಇದರ ಸಹಭಾಗಿತ್ವದಲ್ಲಿ ಉಡುಪಿ ಕುಂಜಿಬೆಟ್ಟಿನ ಶ್ರೀ ಶಾರದಾ ದೇವಸ್ಥಾನದಲ್ಲಿ ನವರಾತ್ರಿ ಪ್ರಯುಕ್ತ ದಿನಾಂಕ 26–09–2022 ಸೋಮವಾರದಿಂದ 04–10–2022 ಮಂಗಳವಾರದವರೆಗೆ ಸಂಜೆ 6.00 ರಿಂದ 8.00 ಘಂಟೆಯವರೆಗೆ ಪ್ರತಿನಿತ್ಯ ಭಜನಾ ಕಾರ್ಯಕ್ರಮ ಸಾಕಾರಗೊಂಡಿತು.

ನವರಾತ್ರಿ ಭಜನಾ ಕಾರ್ಯಕ್ರಮವನ್ನು ಶ್ರೀ ವಾಗೀಶ ಶಾಸ್ತ್ರಿ, ಉಡುಪಿ ಪ್ರಾಂತೀಯ ಧರ್ಮಾಧಿಕಾರಿಗಳು, ದಕ್ಷಿಣಾಮ್ನಾಯ ಶ್ರೀ ಶಾರದಾ ಪೀಠ, ಶೃಂಗೇರಿ ಇವರು 26.09.2022 ಸಂಜೆ 5.30 ಘಂಟೆಗೆ ಶ್ರೀ ಶಾರದಾ ದೇವಸ್ಥಾನ, ಕುಂಜಿಬೆಟ್ಟು, ಉಡುಪಿ, ಇಲ್ಲಿ ದೀಪ ಪ್ರಜ್ವಲಿಸುವ ಮೂಲಕ ಉದ್ಘಾಟಿಸಿ ಶುಭಕೋರಿದರು.

ಮುಖ್ಯ ಅತಿಥಿಗಳಾಗಿ ಶ್ರೀ ಮಂಜುನಾಥ ಹೆಬ್ಬಾರ್, ಅಧ್ಯಕ್ಷರು, ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ, ಕುಂಜಿಬೆಟ್ಟು, ಉಡುಪಿ, ಅಧ್ಯಕ್ಷರು, ಶ್ರೀ ಶಾಂಕರ ತತ್ತ್ವ ಪ್ರಸಾರ ಅಭಿಯಾನ, ಉಡುಪಿ ತಾಲೂಕು ಇವರು ಉಪಸ್ಥಿತರಿದ್ದರು. ಶ್ರೀ ಪ್ರಭಾಕರ ಭಂಡಿ, ಕಾರ್ಯದರ್ಶಿ, ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ, ಕುಂಜಿಬೆಟ್ಟು, ಉಡುಪಿ, ಶ್ರೀ ಟಿ. ವಿಶ್ವನಾಥ ಶಾನುಭೋಗ್, ಜಿಲ್ಲಾ ಸಂಚಾಲಕರು, ಶ್ರೀ ಶಾಂಕರ ತತ್ತ್ವ ಪ್ರಸಾರ ಅಭಿಯಾನ, ಉಡುಪಿ ಜಿಲ್ಲೆ, ಶ್ರೀ ಟಿ. ಗಿರೀಶ್, ಜಿಲ್ಲಾ ಭಜನಾ ಸಂಚಾಲಕರು, ಶ್ರೀ ಶಾಂಕರ ತತ್ತ್ವ ಪ್ರಸಾರ ಅಭಿಯಾನ, ಉಡುಪಿ ಜಿಲ್ಲೆ ಮತ್ತು ಶ್ರೀ ಕೃಷ್ಣಕುಮಾರ್ ಮಟ್ಟು, ಜಿಲ್ಲಾ ಸಹ ಸಂಚಾಲಕರು, ಶ್ರೀ ಶಾಂಕರ ತತ್ತ್ವ ಪ್ರಸಾರ ಅಭಿಯಾನ, ಉಡುಪಿ ಜಿಲ್ಲೆ ಇವರುಗಳು ಉಪಸ್ಥಿತರಿದ್ದರು.

ಪ್ರತಿ ನಿತ್ಯ ಎರಡು ಭಜನಾ ತಂಡಗಳಂತೆ ಒಟ್ಟು 18 ಭಜನಾ ತಂಡಗಳು ಭಾಗವಹಿಸಿದ್ದವು. ಪ್ರತಿ ನಿತ್ಯ ಒಂದು ಕುಳಿತು ಮಾಡುವ ಭಜನೆ ಹಾಗೂ ಒಂದು ಕುಣಿತ ಭಜನೆ ನಡೆದು ಸೇರಿದ ಜನರನ್ನು ಮಂತ್ರಮುಗ್ಧಗೊಳಿಸಿತು. ನಿತ್ಯ ಭಾಗವಹಿಸಿದ ಭಜನಾ ತಂಡಗಳಿಗೆ ಶಾಲು ಹೊದಿಸಿ ಫಲಪುಷ್ಪ ನೀಡಿ ಗೌರವಿಸಲಾಯಿತು.

**ಭಾಗವಹಿಸಿದ ಭಜನಾ ತಂಡಗಳು :** ಶ್ರೀ ಶಾರದಾ ಭಜನಾ ಮಂಡಳಿ, ಉಡುಪಿ; ಕಲ್ಗುಂಡಿ ಶ್ರೀ ಮಹಾಗಣಪತಿ ಭಜನಾ ಮಂಡಳಿ, ತಂತ್ರಾಡಿ; ಶ್ರೀ ಜ್ಞಾನಶಕ್ತಿ ಸ್ಥಾನಿಕ ಭಜನಾ ಮಂಡಳಿ, ಬ್ರಹ್ಮಾವರ ತಾಲೂಕು; ಶ್ರೀ ಗೋಪಾಲಕೃಷ್ಣ ಆಂಜನೇಯ ಮಹಿಳಾ ಭಜನಾ ಮಂಡಳಿ, ಮೇಲ್ಮಠ, ನಡೂರು, ಅಲೆಯ; ಮಹಿಳಾ ವೇದಿಕೆ, ಸ್ಥಾನಿಕ ಬ್ರಾಹ್ಮಣ ಸಭಾ(ರಿ.), ಪಡುಬಿದ್ರಿ; ಶ್ರೀ ದುರ್ಗಾಪರಮೇಶ್ವರಿ ಭಜನಾ ಮಂಡಳಿ, ಹಲುವಳ್ಳಿ; ಶಿವಾನಿ ವಿಪ್ರ ಮಹಿಳಾ ಭಜನಾ ಮಂಡಳಿ, ಸೂರಾಲು ವಲಯ; ಶ್ರೀ ಕೃಷ್ಣ ಭಜನಾ ಮಂಡಳಿ, ಬೈಕಾಡಿ; ಸಮೃದ್ಧಿ ಮಹಿಳಾ ಭಜನಾ ಮಂಡಳಿ, ಪೇತ್ರಿ; ಪದ್ಮಾವತಿ ಭಜನಾ ಮಂಡಳಿ, ಅಂಬಾಗಿಲು; ಶ್ರೀ ವಿಷ್ಣು ಭಜನಾ ಮಂಡಳಿ ಎರ್ಮಾಳು; ಬಡಾ ಕೊಡ್ಲಿ ಶ್ರೀ ದುರ್ಗಾಂಬಾ ಮಹಿಳಾ ಭಜನಾ ಮಂಡಳಿ; ಜ್ಞಾನವಿಕಾಸ ಭಜನಾ ಮಂಡಳಿ, ಹಾಲಕ್ಕಿ; ಓಂ ಶ್ರೀ ಜಗನ್ಮಾತಾ ಭಜನಾ ಮಂಡಳಿ, ಶಿರಿಯಾರ; ಮಹಾಸತೀಶ್ವರೀ ಭಜನಾ ಮಂಡಳಿ, ಕೋಡಿ, ಕನ್ಯಾನ; ಶ್ರೀ ಮಾತಾ ಮಹಿಳಾ ಭಜನಾ ಮಂಡಳಿ, ಕರಂಬಳ್ಳಿ; ಶ್ರೀ ರಾಮ ಮಹಿಳಾ ಸಂಘ, ಸಾಲಿಗ್ರಾಮ.

# "ನಿತ್ಯೋತ್ಸವ ಕಂಡ ಬಾರಕೂರು" ಪುಸ್ತಕ ಬಿಡುಗಡೆ





ಇಂದಿನ ಹಾಗೂ ಮುಂದಿನ ಪೀಳಿಗೆಗೆ ಬಾರಕೂರಿನ ಗತಇತಿಹಾಸ ಸೇರಿದಂತೆ ಸಮಗ್ರ ಪರಿಚಯ ಮಾಡಿಕೊಡುವ ವೈ. ಮೋಹನ ರಾವ್ ಅವರ ಕೃತಿ 'ನಿತ್ಯೋತ್ಸವ ಕಂಡ ಬಾರಕೂರು' ಒಂದು ಉಪಯುಕ ಹಾಗೂ ಸಂಗ್ರಹಯೋಗ್ಯ ಗ್ರಂಥವಾಗಿ ಮೂಡಿಬಂದಿದೆ ಎಂದು ವಿಶ್ರಾಂತ ಪ್ರಾಂಶುಪಾಲ ಬಿ. ಸೀತಾರಾಮ ಶೆಟ್ಟಿ ಹೇಳಿದರು. ಅವರು ಬಾರಕೂರಿನ ನೇಶನಲ್ ಪದವಿಪೂರ್ವ ಕಾಲೇಜಿನ ರೋಟರಿ ಸಭಾಭವನದಲ್ಲಿ ಕೃತಿ ಲೋಕಾರ್ಪಣೆಗೊಳಿಸಿ ಮಾತನಾಡಿದರು.

ಎಂ.ಜಿ.ಎಂ. ಕಾಲೇಜಿನ ಗೋವಿಂದ ಪೈ ಸಂಶೋಧನಾ ಕೇಂದ್ರದ ಆಡಳಿತಾಧಿಕಾರಿ ಡಾ। ಬಿ. ಜಗದೀಶ್ ಶೆಟ್ಟಿ ಕೃತಿ ಪರಿಚಯ ಮಾಡುತ್ತಾ ವೈ. ಮೋಹನ ರಾವ್ ಅವರು ಸಾಮಾನ್ಯ ಓದುಗರಿಗೆ ಸುಲಭ ರೀತಿಯಲ್ಲಿ ಗ್ರಾಹ್ಯವಾಗುವ ಈ ಪುಸ್ತಕವನ್ನು ಬರೆಯುತ್ತಿರುವುದು ಸ್ವಾಗತಾರ್ಹ. ಆದರೆ ಅವರು ಬಾರಕೂರಿನ ಕುರಿತಾದ ಅಧ್ಯಯನಕ್ಕೆ ಈ ಪುಸ್ತಕವನ್ನು ಸೀಮಿತಗೊಳಿಸದೆ, ಬಾರಕೂರು ರಾಜ್ಯ ಎಂಬುದಾಗಿ ಇತಿಹಾಸ ಕಾಲದಲ್ಲಿ ಏನು ಕರೆಯಲ್ಪಡುತಿತ್ತೋ ಆ ಸೀಮೆಗೆ ತಮ್ಮ ಅಧ್ಯಯನ ಹರೆವನ್ನು ವಿಸ್ತರಿಸಿದ್ದಾರೆ ಎಂದು ಹೇಳಿದರು. ಅತಿಥಿಗಳಾಗಿ ಶ್ಯಾಮಿಲಿ ಸಮೂಹ ಸಂಸ್ಥೆಗಳ ಪ್ರವರ್ತಕ ನಾಡೋಜ ಡಾ। ಜಿ. ಶಂಕರ್, ನ್ಯಾಶನಲ್ ಪ.ಪೂ. ಕಾಲೇಜಿನ ಪ್ರಾಂಶುಪಾಲ ರು. ಕೊಟ್ರಸ್ವಾಮಿ, ಉದಯವಾಣಿಯ ವಿಶ್ರಾಂತ ಹಿರಿಯ ಉಪಸಂಪಾದಕ ಎಸ್. ನಿತ್ಯಾನಂದ ಪಡ್ರೆ, ಚಾರ್ಟರ್ಡ್ ಅಕೌಂಟೆಂಟ್ ಬಿ. ಗಣೇಶ್ ಕಾಂಚನ್, ಕರ್ನಾಟಕ ಬ್ಯಾಂಕ್‌ನ ವಿಶ್ರಾಂತ ಅಧಿಕಾರಿ ನಂದಳಿಕೆ ಬಾಲಚಂದ್ರ ರಾವ್ ಮತ್ತು ಯಕ್ಷಗುರು ಐರೋಡಿ ಮಂಜುನಾಥ ಕುಲಾಲ್ ಶುಭ ಹಾರೈಸಿದರು. ಸಮಾರಂಭದಲ್ಲಿ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಬನ್ನಂಜೆ ಬಾಬು ಅಮೀನ್ ಅವರನ್ನು ಗೌರವಿಸಲಾಯಿತು. ಆಕರ ಗ್ರಂಥಗಳ ಕರ್ತೃ, ಇತಿಹಾಸಕಾರ ದಿ. ಬಿ. ವಸಂತ ಶೆಟ್ಟಿ, ನಾಲ್ಕೂರಕ್ಕೂ ಮಿಕ್ಕಿ ಫೋಟೋಗಳನ್ನು ಒದಗಿಸಿ ಸಹಕರಿಸಿದ ದಿ. ಮೂಡುಕೇರಿ ವಿಶ್ವನಾಥ ಶಾಸ್ತ್ರಿಯವರನ್ನು ಗ್ರಂಥಕರ್ತ ವೈ. ಮೋಹನ ರಾವ್ ಸ್ಮರಿಸಿದರು. ಬಾರಕೂರು ವಿದ್ಯಾವರ್ಧಿನಿ ಸಂಘದ ಅಧ್ಯಕ್ಷ ಬಿ. ಶಾಂತಾರಾಮಶೆಟ್ಟಿ ಅಧ್ಯಕ್ಷತೆ ವಹಿಸಿದ್ದರು. ವೈ.ಮೋಹನ್ ರಾವ್ ಅವರನ್ನು ಬಾರಕೂರಿನ ಜನತೆಯ ಪರವಾಗಿ ಸಮ್ಮಾನಿಸಲಾಯಿತು. ರಾಮ ಭಟ್ ಸಜಂಗದ್ದೆ ನಿರ್ವಹಿಸಿ, ಧೀರಜ್ ವಂದಿಸಿದರು.




ತಂತ್ರಾಡಿ ವಿಶ್ವನಾಥ ಶಾನುಭೋಗ್

94487 24161
97417 85551

ಹರಿಕೃಷ್ಣ ಡಿಜಿಟಲ್ಸ್

ಶುಭ ಸಮಾರಂಭಗಳ ಛಾಯಾಚಿತ್ರಣ ಹಾಗೂ ವೀಡಿಯೊ ಚಿತ್ರಣಕ್ಕಾಗಿ ಸಂಪರ್ಕಿಸಿ

"ಶ್ರೀರಂಗ ", ವಿ. ಪಿ. ನಗರ, 3ನೇ ಮುಖ್ಯ ರಸ್ತೆ, ಕುಂಜಿಬೆಟ್ಟು, ಉಡುಪಿ – 576102

ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು

GST : 29AKMPN4985H1ZD

ಶ್ರೀ ಕೃಷ್ಣ ಎಲೆಕ್ಟ್ರಾನಿಕ್ಸ್ & ಎಲೆಕ್ಟ್ರಿಕಲ್ಸ್

Mob. 9448953022

SHREE KRISHNA ELECCTRONICS & ELECTRICALS

Sri Balaji Complex, Shop No-G-7, Near KSRTC Bus Stand, Udupi - 576101.

City Towers, Service Bus Stand, Near Rao and Rao Circle, State Bank, Mangalore - 575001

Branch at Mahalaxmi Prabha Complex, Market Road, Opp Tajmahal Hotel, Karkala

With Best Compliments From :

BUILDING DREAMS, ENHANCING LIVES.



NAKSHATRA — GANDHINAGAR —

SOLITAIRE — HATHILL, —

HABITAT ONE 54 — DEREBAIL —

ANANTESSH — CAR STREET, —

Land® Trades
BUILDERS & DEVELOPERS
BUILDING TRUST, DELIVERING VALUE

MANGALURU'S
LEADING REAL ESTATE COMPANY

RESIDENTIAL | COMMERCIAL | PLOTS

For More Details : 8882 777 444 | 0824 2425424, 2423866 | www.landtrades.in

Follow us on :


Owned, Published & Edited by : Sri Y. Muralikrishna Rao onbehalf of Sri Sthanika Brahmana Sangha (R.), Shri Sharada Mantapa, Sharada Nagara, Kunjibettu, Udupi - 576 102. Ph : 2958444
Designed & Printed @ SriNidhi Computer Graphics, Rajataadri, Manipal. E-mail : srisharadaudupi@gmail.com Website : www.srisharada.org